# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

# ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ– 2016–17

# ನವಂಬರ್–2017

**ಗೌರವಾನ್ವಿತ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಬೆಂಗಳೂರು ಇವರ ಮುಂದೆ**

ಈ ವಿಷಯಕ್ಕೆ ಸಂಬಂಧಿಸಿದಂತೆ,
ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪ್ರಕರಣ 61, 62 ಮತ್ತು 64 ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ದರ) ನಿಯಾಮವಳಿ 2000 ಹಾಗೂ ತಿದ್ದುಪಡಿಗಳು ಮತ್ತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಾಮವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಲೆಕ್ಕಪರಿಶೋಧನೆಗೆ ಒಳಪಡಿಸಿದ ಲೆಕ್ಕಗಳ ಪ್ರಕಾರ ಆರ್ಥಿಕ ವರ್ಷ 2016-17ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎ.ಪಿ.ಆರ್) ಅನುಮೋದನೆಗಾಗಿ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಕೆ ವಿಷಯದಲ್ಲಿ

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,**
**ಕಾವೇರಿ ಭವನ, ಬೆಂಗಳೂರು-560009.** ....... **ಅರ್ಜಿದಾರರು**

**ಕವಿಪ್ರನಿನಿಯ ಎಪಿಆರ್ 2017 ರ ಬಗ್ಗೆ.**

**<u>ಅಫಿಡವಿಟ್</u>**

1. ಸುಮಾರು 59 ವರ್ಷ ವಯಸ್ಸುಳ್ಳ ಶ್ರೀಮತಿ ಎನ್. ಹೇಮಾವತಿ, W/O. ಜಿ.ಆರ್ ಗೋವಿಂದರಾಜು, ಆರ್ಥಿಕ ಸಲಹೆಗಾರರು, ನಿಯಂತ್ರಣ ವ್ಯವಹಾರಗಳು, **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೆಂಗಳೂರು** ಆದ ನಾನು ವಿಧೇಯಪೂರ್ವಕವಾಗಿ ಈ ಕೆಳಗೆ ಸೂಚಿಸಿರುವ ಅಂಶಗಳನ್ನು ದೃಢೀಕರಿಸುತ್ತಿದ್ದೇನೆ.

2. ನಾನು ನಿಯಂತ್ರಣ ವ್ಯವಹಾರಗಳ ಎಲ್ಲಾ ಮೇಲ್ವಿಚಾರಣೆಗಳನ್ನು ನೋಡಿಕೊಳ್ಳುತ್ತಿದ್ದೇನೆ ಹಾಗೂ ಅಫಿಡವಿಟ್‌ನ್ನು ಮಾಡುವ ಜವಾಬ್ದಾರಿ ಹೊಂದಿರುತ್ತೇನೆ.

3. ಈ ಅಫಿಡವಿಟ್‌ಗೆ ಲಗತ್ತಿಸಲಾದ ಷಡ್ಯುಲ್ 'ಎ' ನಲ್ಲಿ ಮಾಡಲಾದ ಹೇಳಿಕೆ ಮತ್ತು ಅಂಕಿ ಅಂಶಗಳು (ಪುಟ 1 ರಿಂದ 82 ರಲ್ಲಿ ನಮೂದಿಸಿರುವುದು) ನನ್ನ ತಿಳುವಳಿಕೆಗೆ ಬಂದಂತೆ ಸತ್ಯಾಂಶವಾಗಿರುತ್ತದೆಯೆಂದು ಮತ್ತು ಷಡ್ಯುಲ್ 'ಎ' ನಲ್ಲಿ ಸೂಚಿಸಲಾಗಿರುವ ಹೇಳಿಕೆಗಳು ಸತ್ಯ ಮಾಹಿತಿ ಹಾಗೂ ನಿಖರ ಆಧಾರಿತ ಎಂದು ನಾನು ನಂಬುತ್ತೇನೆ.

4. ಇಂದು ದಿನಾಂಕ 30.11.2017 ರಂದು ಮೇಲೆ ಸೂಚಿಸಿರುವಂತೆ ಈ ಅಫಿಡವಿಟ್‌ನ ಅಡಕಗಳು ಹಾಗೂ ವಸ್ತುಗಳು ನನ್ನ ತಿಳುವಳಿಕೆಗೆ ಬಂದಂತೆ ಸತ್ಯವೂ ಹಾಗು ನಿಖರವೂ ಆಗಿರುತ್ತವೆಂದು ದೃಢೀಕರಿಸುತ್ತಿದ್ದೇನೆ. ಇದರಲ್ಲಿ ಯಾವುದೇ ಮಾಹಿತಿಯು ಅಸತ್ಯವಾಗಿಲ್ಲ ಅಥವ ಯಾವುದೇ ಮಾಹಿತಿಯು ಮರೆಮಾಚಿಲ್ಲ.

ಸ್ಥಳ: ಬೆಂಗಳೂರು ಕವಿಪ್ರನಿನಿಯ ಪರವಾಗಿ
ದಿನಾಂಕ: 30.11.2017

# ಪರಿವಿಡಿ



| | ಕವಿಪ್ರನಿನಿ ಯ 2016–17 ರ ಪರಿಷ್ಕೃತ ಎ.ಅರ್.ಆರ್ | | ಪುಟ ಸಂಖ್ಯೆ |
|---|---|---|---|
| **1** | 1.1 | ವಾರ್ಷಿಕ ಕಾರ್ಯಸಾಧನೆ ಮಂಡನೆಯ ಅಗತ್ಯತೆ | 9 |
| **2** | **ಕ.ವಿ.ನಿ ಆಯೋಗದ ನಿರ್ದೇಶನಗಳು** | | |
| | 2.1 | ರಿಯಾಕ್ಟೀವ್ ಪವರ್ ಕಾಂಪನ್ಸೇಶನ್ ಮತ್ತು ವಿಫಲಗೊಂಡ ಕೆಪಾಸಿಟರ್‌ಗಳ ಪುನರ್ ಸ್ಥಾಪನೆ | 15 |
| | 2.2 | ಪ್ರಸರಣ ಜಾಲದ ಲಭ್ಯತೆ– ಮಾಸಿಕ ವರದಿ | 16 |
| | 2.3 | ರಾಜ್ಯದೊಳಗಿನ ಎಬಿಟಿ ಅನುಷ್ಠಾನ | 17 |
| | 2.4 | ಎನರ್ಜಿ ಆಡಿಟ್ | 18 |
| | 2.5 | ಸೇವೆಯ ಗುಣಮಟ್ಟ | 18 |
| | 2.6 | ಬಂಡವಾಳ ಕಾಮಗಾರಿಗಳು | 19 |
| | 2.7 | ಮಾನವಸಂಪನ್ಮೂಲ ಅಧ್ಯಯನ | 19 |
| | 2.8 | ವಿದ್ಯುತ್ ಅಪಘಾತಗಳ ತಡೆ | 20 |
| **3** | **ವಿದ್ಯುತ್ ಪ್ರಸರಣೆ ಮತ್ತು ನಷ್ಟಗಳು** | | 21 |
| **4** | **ಆರ್ಥಿಕ ವರ್ಷ–2016–17ರಲ್ಲಿ ಕವಿಪ್ರನಿನಿಯ ಕಾರ್ಯಸಾಧನೆ** | | |
| | 4.1 | ಕವಿಪ್ರನಿನಿಯ 2016–17 ರ ಅರ್ಥಿಕ ಸಾಧನೆಗಳು | 23 |
| | 4.2 | ಬಂಡವಾಳ ಕಾಮಗಾರಿಗಳು– ಸಾಧನೆಗಳು | 25 |
| **5** | **ಪ್ರಸರಣ ಶುಲ್ಕಗಳಿಗೆ ಮೂಲ ಕಾರಣ** | | |
| | 5.1<br>5.2 | ಬಂಡವಾಳ ಹೂಡಿಕೆಯ ಕಾರ್ಯಕ್ರಮಕ್ಕೆ ಮೂಲ ಕಾರಣ | 29 |
| | 5.3 | ಕಾಲಕಾಲಕ್ಕೆ ಖಚಿತಪಡಿಸಬೇಕಾಗಿರುವ ಭರವಸೆಯ ಆದಾಯ | 30 |

| | **ಕವಿಪ್ರನಿನಿ ಯ 2016–17 ರ ಪರಿಷ್ಕೃತ ಎ.ಅರ್.ಆರ್** | | **ಪುಟ ಸಂಖ್ಯೆ** |
|---|---|---|---|
| **6** | **ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣ ವೆಚ್ಚಗಳ ವಿಭಜನೆ** | | |
| | 6.1 | ದುರಸ್ತಿ ಮತ್ತು ನಿರ್ವಹಣಾ ವೆಚ್ಚಗಳು | 31 |
| | 6.2 | ಸಿಬ್ಬಂದಿ ವೆಚ್ಚಗಳು | 32 |
| | 6.3 | ಆಡಳಿತ ಮತ್ತು ಸಾಮಾನ್ಯ ವೆಚ್ಚಗಳು | 33 |
| | 6.4 | ಕಾರ್ಯ ಮತ್ತು ಪಾಲನೆ ವೆಚ್ಚಗಳು – ಬಹುವಾರ್ಷಿಕ ನಿಯಮಗಳ ಅಡಿಯಲ್ಲಿ | 33 |
| | 6.5 | ಸವಕಳಿ | 37 |
| | 6.6 | ಬಡ್ಡಿ ಮತ್ತು ಹಣಕಾಸು ವೆಚ್ಚಗಳು | 37 |
| | 6.7 | ಈಕ್ವಿಟಿ ಮೇಲಿನ ಗಳಿಕೆ. | 38 |
| | 6.8 | ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವೆಚ್ಚಗಳು. | 39 |
| **7.0** | **2016–17ನೇ ಸಾಲಿನ ಕವಿಪ್ರನಿನಿಯ ವಾರ್ಷಿಕ ಆದಾಯದ ಅವಶ್ಯಕತೆ** | | |
| | 7.1 | ಆರ್ಥಿಕ ವರ್ಷ –2017ರಲ್ಲಿನ ವಾರ್ಷಿಕ ಆದಾಯದ ಅವಶ್ಯಕತೆ – ವಾಸ್ತವಿಕ. | 41 |
| | 7.2 | ಪ್ರಸರಣ ದರದ ವಸೂಲಿ | 42 |
| | 7.3 | ಪ್ರಸರಣ ದರದಿಂದ ಆದಾಯ | 42 |
| | 7.4 | ಆದಾಯ ಖಾತೆ | 42 |
| | 7.5 | ದಕ್ಷತೆಯ ಲಾಭ / ನಷ್ಟಗಳ ಹಂಚಿಕೆ. | 43 |
| **8.0** | **ವಿಸಕಂಗಳಿಂದ ಪ್ರಸರಣ ದರದ ಪಾವತಿ** | | |
| | 8.1 | ವಿಸಕಂ ಗಳು ದರ ಪಾವತಿಗೆ ಅನುಸರಿಸಿದ ವಿಧಾನ | 44 |
| | 8.2 | ವಿಸಕಂ ಗಳು ದರ ಪಾವತಿ ಮಾಡಲು ಪಾಲಿಸಬೇಕಾದ ಕ್ರಮ | 45 |
| **9.0** | **ಮನವಿ** | | 48 |

**ಅನುಬಂಧ**



| | | |
|---|---|---|
| 1. | ವಿದ್ಯುತ್ ಮಾರ್ಗ ಮತ್ತು ಬೇ ಗಳ ವೆಚ್ಚದ ಪಟ್ಟಿ ಆರ್ಥಿಕ ವರ್ಷ – 2017 | 79 |
| 2. | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಇಎನ್/131/ಪಿಎಸ್ಆರ್–2003 ದಿನಾಂಕ 10.05.2005 | 80–82 |

## ನಮೂನೆಗಳು



| ಪ್ರಸರಣ ದರ ಅರ್ಜಿಯ ನಮೂನೆಗಳು ಎ-1 ರಿಂದ ಎ-5 ಮತ್ತು ಟಿ-1 ರಿಂದ ಟಿ-23 | | |
|---|---|---|
| ಎ-1 | ಲಾಭ ಮತು ನಷ್ಟ ದ ಖಾತೆ | 49 |
| ಎ-2 | ಬ್ಯಾಲೆನ್ಸ್ ಶೀಟ್ | 50 |
| ಎ-3 | ನಗದು ಹರಿವು ಪಟ್ಟಿ. | 51 |
| ಎ-4 | ಸಮಗ್ರ ಆದಾಯದ ಅಗತ್ಯತೆ | 52 |
| ಎ-5 | ಆದಾಯದ ಅಗತ್ಯತೆ - ಬಂಡವಾಳ ಆಧಾರಿತ | 53 |
| ಟಿ-1 | ವಿದ್ಯುತ್ ಖರೀದಿ ವೆಚ್ಚ | 54 |
| ಟಿ-2 | ಪ್ರಸರಣ ದರದ ಆದಾಯ | 55 |
| ಟಿ-3 | ರೆವೆನ್ಯೂ ಸಬ್ಸಿಡಿ ಮತ್ತು ಗ್ರಾಂಟ್ | 56 |
| ಟಿ-4 | ದರಯೇತರ ಆದಾಯ. | 57 |
| ಟಿ-5 | ದುರಸ್ತಿ ಮತ್ತು ಪಾಲನ ವೆಚ್ಚಗಳು | 58 |
| ಟಿ-6 | ಸಿಬ್ಬಂದಿ ವೆಚ್ಚಗಳು | 59 |
| ಟಿ-6ಎ | ಸಿಬ್ಬಂದಿ ವೆಚ್ಚಗಳು - ಅಧಿಕ ಮಾಹಿತಿ. | 60 |
| ಟಿ-7 | ಆಡಳಿತ ಮತ್ತು ಇತರ ವೆಚ್ಚಗಳು | 61 |
| ಟಿ-8 | ಸವಕಳಿ | 62 |
| ಟಿ-9 | ಸಾಲಗಳು ಮತು ಡಿಬೆಂಚರ್ಸ್ ಮತ್ತು ಬಡ್ಡಿ ವೆಚ್ಚಗಳು | 63 |
| ಟಿ-9ಎ | ಸೇಲ್ ಅಂಡ್ ಲೀಸ್ ಬ್ಯಾಕ್ ಆಫ್ ಅಸೆಟ್ಸ್ | 64 |
| ಟಿ-10 | ಬಂಡವಾಳೀಕರಿಸಿದ ವೆಚ್ಚಗಳ ವಿವರಗಳು | 65 |
| ಟಿ-11 | ಇತರೆ ಡೆಬಿಟ್‌ಗಳು | 66 |
| ಟಿ-12 | ಅಸಾಧಾರಣ ಬಾಬ್ತು | 67 |
| ಟಿ-13 | ನಿವ್ವಳ ಹಿಂದಿನ ಅವಧಿಯ ಕ್ರೆಡಿಟ್/ಛಾರ್ಜಸ್ | 68 |
| ಟಿ-14 | ಬಂಡವಾಳ ಹೂಡಿಕೆ ಆಸ್ತಿಯ ಮೇಲೆ ವಂತಿಗೆ ಮತ್ತು ಸಬ್ಸಿಡಿ | 69 |
| ಟಿ-15 | ಒಟ್ಟು ಸ್ಥಿರ ಆಸ್ತಿ (ಗ್ರಾಸ್ ಫಿಕ್ಸೆಡ್ ಅಸೆಟ್ಸ್) | 70 |
| ಟಿ-16 | ನಿವ್ವಳ ಸ್ಥಿರ ಆಸ್ತಿ (ನೆಟ್ ಫಿಕ್ಸೆಡ್ ಅಸೆಟ್ಸ್) | 71 |
| ಟಿ-17 | ಪ್ರಗತಿಯಲ್ಲಿರುವ ಕಾಮಗಾರಿ | 72 |
| ಟಿ-18 | ಪ್ರಸಕ್ತ ವರ್ಷದ ಕಂದಾಯ ಬೇಡಿಕೆ, ವಸೂಲಿ ಮತ್ತು ಬಾಕಿ | 73 |
| ಟಿ-19 | ವಿದ್ಯುಚ್ಛಕ್ತಿ ಪ್ರವಾಹ ಚಿತ್ರ ( ಎನರ್ಜಿ ಫ್ಲೋ ಡಯಾಗ್ರಾಮ್) | 74 |
| ಟಿ-20 | ಪ್ರಸಕ್ತ ದರ ಮತ್ತು ಪ್ರಸ್ತಾಪಿತ ದರ | 75 |
| ಟಿ-21 | ಪ್ರಸಕ್ತ ಕಂದಾಯ ಮತ್ತು ಪ್ರಸ್ತಾವಿತ ಕಂದಾಯ | 76 |
| ಟಿ-22 | ಪ್ರಸ್ತಾವಿತ ದರವು ವರ್ಷದ ಮಧ್ಯದಲ್ಲಿ ಅನ್ವಯಗೊಂಡಾಗ ನಿರೀಕ್ಷಿತ ಆದಾಯ | 77 |
| ಟಿ-23 | ವಿದ್ಯುತ್ ಸರಬರಾಜಿನ ಹುದುಗಿದ ವೆಚ್ಚ (ಎಂಬೆಡೆಡ್ ಕಾಸ್ಟ್) | 78 |

## ಕೋಷ್ಟಕಗಳ ಪಟ್ಟಿ


| | | |
|---|---|---|
| ಕೋಷ್ಟಕ– 1 | ಆರ್ಥಿಕ ವರ್ಷ 2016–17ರಲ್ಲಿ ವೋಲ್ಟೇಜ್ ವರ್ಗವಾರು ವಿದ್ಯುತ್ ಪ್ರಸರಣ ನಷ್ಟಗಳು. | 21 |
| ಕೋಷ್ಟಕ –2 | ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣ ನಷ್ಟದ ಪಥ | 21 |
| ಕೋಷ್ಟಕ –3 | ಆರ್ಥಿಕ ವರ್ಷ 2016–17ರಲ್ಲಿ ವಿದ್ಯುತ್ ಜಾಲದ ಲಭ್ಯತೆ | 22 |
| ಕೋಷ್ಟಕ –4 | ಆರ್ಥಿಕ ವರ್ಷ 2016–17 ರ ಅರ್ಥಿಕ ಸಾಧನೆಗಳು | 23 |
| ಕೋಷ್ಟಕ –5 | ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣದಿಂದ ಗಳಿಸಿದ ಕಂದಾಯ– ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಗಾಗಿ | 24 |
| ಕೋಷ್ಟಕ –6 | ಆರ್ಥಿಕ ವರ್ಷ 2016–17ರ ಬಂಡವಾಳ ಕಾಮಗಾರಿಗಳು | 25 |
| ಕೋಷ್ಟಕ –7 | ಆರ್ಥಿಕ ವರ್ಷ 2016–17 ರಲ್ಲಿ ಪೂರ್ಣಗೊಂಡ ಉಪ ಕೇಂದ್ರಗಳು | 26 |
| ಕೋಷ್ಟಕ –8 | ಆರ್ಥಿಕ ವರ್ಷ 2016–17 ರಲ್ಲಿ ನಿರ್ಮಿಸಿದ / ಕಾಮಗಾರಿ ಪೂರ್ಣಗೊಂಡ ವಿದ್ಯುತ್ ಮಾರ್ಗಗಳು (ಮಾರ್ಗ ಕಿ.ಮೀಗಳಲ್ಲಿ) | 26 |
| ಕೋಷ್ಟಕ –9 | ಆರ್ಥಿಕ ವರ್ಷ 2016–17 ರಲ್ಲಿ ವೃದ್ಧೀಕರಿಸಿದ ಕಾಮಗಾರಿಗಳು | 27 |
| ಕೋಷ್ಟಕ –10 | ಆರ್ಥಿಕ ವರ್ಷ 2016–17ರ ಕವಿಪ್ರನಿನಿಯ ಹಣಕಾಸಿನ ಸಾಧನೆ | 30 |
| ಕೋಷ್ಟಕ –11 | ಆರ್ಥಿಕ ವರ್ಷ 2016–17ರ ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳು | 31 |
| ಕೋಷ್ಟಕ –12 | ಆರ್ಥಿಕ ವರ್ಷ 2016–17ರ ಸಿಬ್ಬಂದಿ ವೆಚ್ಚಗಳ ವಿವರಗಳು | 32 |
| ಕೋಷ್ಟಕ –13 | ಕವಿನಿ ಆಯೋಗದ ದಿನಾಂಕ 30.03.2016ರ ದರಾದೇಶದಂತೆ ಆರ್ಥಿಕ ವರ್ಷ 2016–17ಕ್ಕೆ ನಿಬಂಧನೆಗಳನುಸಾರ ಕಾರ್ಯ ಮತ್ತು ಪಾಲನೆ ವೆಚ್ಚಗಳು | 34 |
| ಕೋಷ್ಟಕ –14 | ದಿನಾಂಕ 31.03.2017ರಂತೆ ಇರುವ ಶಕ್ತಾನುಸಾರ ವಿದ್ಯುತ್ ಮಾರ್ಗಗಳ ಪ್ರಮಾಣ | 34 |
| ಕೋಷ್ಟಕ –15 | ದಿನಾಂಕ 31.03.2017ರಂತೆ ಇರುವ ಬೇಗಳ ಸಂಖ್ಯೆ. | 35 |
| ಕೋಷ್ಟಕ –16 | ಆರ್ಥಿಕ ವರ್ಷ–17ಕ್ಕೆ ಕ.ವಿ.ನಿ ಆಯೋಗದ ನಿಯಮಗಳ ಪ್ರಕಾರ ಕಾರ್ಯ ಮತ್ತು ಪಾಲನೆ ವೆಚ್ಚಗಳ ಲೆಕ್ಕಾಚಾರ. | 35 |
| ಕೋಷ್ಟಕ –17 | ಹೆಚ್ಚುವರಿ ಸಿಬ್ಬಂದಿ ವೆಚ್ಚಗಳು (ನಿಯಂತ್ರಿಸಲಾಗದ ಕಾರ್ಯ ಮತ್ತು ಪಾಲನೆ ವೆಚ್ಚಗಳು) | 36 |
| ಕೋಷ್ಟಕ –18 | ಆರ್ಥಿಕ ವರ್ಷ–2016–17ಕ್ಕೆ ಅನುಮೋದಿಸಬಹುದಾದ ಕಾರ್ಯ ಮತ್ತು ಪಾಲನ ವೆಚ್ಚಗಳು | 36 |
| ಕೋಷ್ಟಕ –19 | ಆರ್ಥಿಕ ವರ್ಷ–2016–17ಕ್ಕೆ ಈಕ್ವಿಟಿ ಮೇಲಿನ ಗಳಿಕೆ | 39 |
| ಕೋಷ್ಟಕ –20 | ಆರ್ಥಿಕ ವರ್ಷ–2016–17ಕ್ಕೆ ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವೆಚ್ಚಗಳು | 40 |
| ಕೋಷ್ಟಕ –21 | 2016–17 ನೇ ಸಾಲಿನ ಪರಿಶೋಧಿತ ಲೆಕ್ಕದ ಆಧಾರದ ಮೇಲೆ ಕವಿಪ್ರನಿನಿಯ ವಾರ್ಷಿಕ ಆದಾಯದ ಅವಶ್ಯಕತೆಯ ವಿವರಗಳು. | 41 |
| ಕೋಷ್ಟಕ –22 | ಆದಾಯ ಖಾತೆ | 43 |
| ಕೋಷ್ಟಕ– 23 | 2016–17 ರಲ್ಲಿ ವಿಸಕಂ ಗಳು ಪಾವತಿಸಿರುವ ಪ್ರಸರಣ ಮೊತ್ತದ ವಿವರ. | 45 |

# "ಎ"

## <u>ಗೌರವಾನ್ವಿತ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ಬೆಂಗಳೂರು , ಇವರ ಮುಂದೆ</u>

**ಈ ಕೆಳಕಂಡ ವಿಷಯಕ್ಕೆ ಸಂಬಂಧಿಸಿದಂತೆ,**

**ವಿದ್ಯುತ್ ಕಾಯಿದೆ 2003 ರ ಪರಿಚ್ಛೇದ 61, 62 ಮತ್ತು 64 ಇದರೊಂದಿಗೆ ಸಂಬಂದಪಟ್ಟ ಕ.ವಿ.ನಿ ಆಯೋಗದ (ದರ) ನಿಯಮಗಳು, 2000 ಹಾಗೂ ತಿದ್ದುಪಡಿಗಳು, ಕ.ವಿ.ನಿ ಆಯೋಗದ (ವಿದ್ಯುತ್ ಪ್ರಸರಣ ದರ ನಿರ್ಧಾರದ ಕರಾರು ಮತ್ತು ಷರತ್ತುಗಳ) ನಿಯಮಗಳು, 2006 ಹಾಗೂ ತಿದ್ದುಪಡಿಗಳು, ಇವುಗಳ ಅಡಿಯಲ್ಲಿ, ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಗಾಗಿ, ಅರ್ಥಿಕ ವರ್ಷ 2017 ರ ಪರಿಶೋಧಿತ ಲೆಕ್ಕದ ಆಧಾರದ ಮೇಲೆ ಪ್ರಸರಣ ಪರವಾನಗಿ ಹೊಂದಿರುವ ಕವಿಪ್ರನಿನಿಯು ಸಲ್ಲಿಸಿರುವ ಅರ್ಜಿ.**

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ. (ಕ ವಿ ಪ್ರ ನಿ ನಿ),**
**ಕಾವೇರಿ ಭವನ,**
**ಬೆಂಗಳೂರು – 560 009** ... ಅರ್ಜಿದಾರರು

**ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ , ಕ ವಿ ಪ್ರ ನಿ ನಿ ಯು ಅತ್ಯಂತ ಗೌರವದಿಂದ 2016–17 ರ ಆರ್ಥಿಕ ವರ್ಷದ ತನ್ನ ವಾರ್ಷಿಕ ಅದಾಯದ ಅಗತ್ಯತೆಯನ್ನು <u>ಗೌರವಾನ್ವಿತ ಆಯೋಗದ ಪರಿಶೀಲನೆ ಹಾಗು ಅನುಮೋದನೆಗಾಗಿ ಸಲ್ಲಿಸಿದೆ.</u>**

1. **ವಿದ್ಯುತ್ ಕಾಯಿದೆ 2003 ರ ಅಡಿಯಲ್ಲಿ ಕ ವಿ ಪ್ರ ನಿ ನಿ ಯು ಪರಿಗಣಿತ ಪ್ರಸರಣ ಪರವಾನಗಿ ಹೊಂದಿದ್ದು ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣ ವ್ಯವಹಾರದಲ್ಲಿ ತೊಡಗಿದೆ.**

2. **ವಿದ್ಯುತ್ ಕಾಯಿದೆ 2003 ರ ಪರಿಚ್ಛೇದ 61, 62 ಮತ್ತು 64 ಇದರೊಂದಿಗೆ ಸಂಬಂಧಪಟ್ಟ ಕ ವಿ ನಿ ಆಯೋಗದ ( ವಿದ್ಯುತ್ ಪ್ರಸರಣ ದರ ನಿರ್ಧಾರದ ಕರಾರು ಮತ್ತು ಷರತ್ತುಗಳ) ನಿಯಮಗಳು, 2006 ಮತ್ತು ತದನಂತರದ ತಿದ್ದುಪಡಿಗಳು ಇವುಗಳ ಅಡಿಯಲ್ಲಿ ಸಲ್ಲಿಸಿರುವ ಅರ್ಜಿ.**

# ಅಧ್ಯಾಯ 1

## 1.0. ವಾರ್ಷಿಕ ಕಾರ್ಯ ಸಾಧನೆ ಪರಿಶೀಲನೆ 2017 :

## 1.1 ವಾರ್ಷಿಕ ಕಾರ್ಯ ಸಾಧನೆಯ ಮಂಡನೆಯ ಅಗತ್ಯತೆ :

**ವಿದ್ಯುತ್ ಕಾಯಿದೆ 2003 ರ ಪರಿಚ್ಛೇದ 61, 62 ಮತ್ತು 64 ಇದರೊಂದಿಗೆ ಸಂಬಂಧಪಟ್ಟ ಕ ವಿ ನಿ ಆಯೋಗದ (ದರ) ನಿಯಮಗಳು, 2000 ಹಾಗೂ ತಿದ್ದುಪಡಿಗಳು ಮತ್ತು ಕ.ವಿ.ನಿ ಆಯೋಗದ (ವಿದ್ಯುತ್ ಪ್ರಸರಣ ದರ ನಿರ್ಧಾರದ ಕರಾರು ಮತ್ತು ಷರತ್ತುಗಳ) ನಿಯಮಗಳು, 2006 ಹಾಗೂ ತಿದ್ದುಪಡಿಗಳು, ಇವುಗಳ ಅಡಿಯಲ್ಲಿ ಹಾಗೂ** ಬಹುವಾರ್ಷಿಕ ವಿದ್ಯುತ್ ದರ ತತ್ವದ ಆಧಾರದ ಮೇಲೆ ಪ್ರತಿ ಆರ್ಥಿಕ ವರ್ಷಕ್ಕೆ. ಪರಿಶೋಧಿತ ಲೆಕ್ಕದ ಆಧಾರದ ಮೇಲೆ **ವಾರ್ಷಿಕ ಕಾರ್ಯ ಸಾಧನೆಯ ಪರಿಶೀಲನೆಗಾಗಿ** ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**1.2** ನಿರೀಕ್ಷಿತ ಆದಾಯ ಮತ್ತು ವಾರ್ಷಿಕ ಆದಾಯದ ಅಗತ್ಯತೆ ಇವುಗಳಿಗೆ ಸಂಬಂಧಿಸಿದಂತೆ , ಕ.ವಿ.ನಿ. ಆಯೋಗ (ದರ) ನಿಯಮಾವಳಿಗಳು 2000 ಮತ್ತು ಅದರ ತಿದ್ದುಪಡಿ ಗಳಲ್ಲಿ ಸೂಚಿಸಿರುವ ನಮೂನೆ ಗಳಲ್ಲಿ ವಿವರಗಳನ್ನು ದಾಖಲಿಸಿ ಈ ಅರ್ಜಿಯೊಂದಿಗೆ ಸಲ್ಲಿಸಲಾಗಿದೆ. 2016-17ನೇ ಸಾಲಿನ ಕವಿಪ್ರನಿನಿಯ ಪರಿಶೋಧಿತ ಲೆಕ್ಕವನ್ನು ಕ.ವಿ.ನಿ ಆಯೋಗಕ್ಕೆ ಈ ಕಚೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ36/70691/2016-17/474 ದಿನಾಂಕ 29.11.2017 ಸಲ್ಲಿಸಲಾಗಿದೆ. 2016-17ನೇ ಸಾಲಿಗೆ ಸಂಬಂಧಿಸಿದಂತೆ ಪರಿಶೋಧಿತ ಲೆಕ್ಕದ ಪ್ರಕಾರ ಪ್ರಸರಣ ದರದಿಂದ ಆದಾಯ ಮತ್ತು ಪ್ರಸರಣೆಗಾಗಿ ಆದ ಖರ್ಚು ಇವುಗಳ ವಿವರಗಳನ್ನು ಈ ಮುಂದಿನ ಪ್ಯಾರಾ ಗಳಲ್ಲಿ ವಿವರಿಸಲಾಗಿದೆ.

**1.3** ಈ ಅರ್ಜಿಯಲ್ಲಿರುವ ವಾರ್ಷಿಕ ಅಗತ್ಯತೆ ಮತ್ತು ಆದಾಯದ ವಿವರಗಳು 2016–17 ನೇ ಸಾಲಿನ ಪರಿಶೋಧಿತ ಲೆಕ್ಕವನ್ನು ಆಧರಿಸಿದೆ ಎಂದು ಕವಪ್ರನಿನಿಯು ಸ್ಪಷ್ಟ ಪಡಿಸುತ್ತದೆ.

**1.4** ಆರ್ಥಿಕ ಸಲಹೆಗಾರರು (ನಿಯಂತ್ರಣ ವ್ಯವಹಾರಗಳು), ಕವಿಪ್ರನಿನಿ ಇವರು ಕ.ವಿ.ನಿ ಅಯೋಗದ ಮುಂದೆ 2016–17ನೇ ಸಾಲಿನ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿಗೆ ಸಹಿ ಮಾಡಲು ಹಾಗೂ ಗೌರಾವಾನ್ವಿತ ಆಯೋಗದ ಮುಂದೆ ಸಲ್ಲಿಸಲು ಅಧಿಕಾರ ನೀಡಿದೆ.

## 1.5 ಕವಿಪ್ರನಿನಿ – ಅವಲೋಕನ :

ಅ) ಕಂಪನಿ ಕಾಯಿದೆ 1956 ರ ಅಡಿಯಲ್ಲಿ 28.07.1999ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕಂಪನಿ ಎಂದು ನೋಂದಾಯಿತವಾಗಿದ್ದು ಪ್ರಸ್ತುತ ಚಾಲ್ತಿಯಲ್ಲಿರುವ ಕಂಪನಿ ಕಾಯಿದೆ 2013 ರ ಅಡಿಯಲ್ಲಿ ಕೆಲಸ ಮಾಡುತ್ತಿದೆ. 01.08.99 ರಿಂದ ವಿದ್ಯುತ್ ವಿತರಣೆ ಹಾಗೂ ಪ್ರಸರಣೆ ಎರಡೂ ಜವಾಬ್ದಾರಿ ಹೊಂದಿದ್ದ ಸಂಸ್ಥೆಯು ದಿನಾಂಕ 01.06.2002 ರಿಂದ ಕೇವಲ ಪ್ರಸರಣ ಸಂಸ್ಥೆಯಾಗಿ ಮುಂದುವರೆದಿದೆ. ಆದಾಗ್ಯೂ 10.06.2005 ರವರೆಗೆ ರಾಜ್ಯದ ವಿದ್ಯುತ್ ಖರೀದಿ ವ್ಯವಹಾರಗಳನ್ನು ನಿಭಾಯಿಸುವ ಜವಾಬ್ದಾರಿ ಹೊಂದಿತ್ತು. ಆದರೆ ವಿದ್ಯುತ್ ಕಾಯಿದೆ 2003 ರ ಪ್ರಕಾರ ಪ್ರಸರಣ ಲೈಸೆನ್ಸ್ ಹೊಂದಿದವರು ವಿದ್ಯುತ್ ಖರೀದಿ ವ್ಯವಹಾರದಲ್ಲಿ ತೊಡಗುವುದು ನಿಷೇಧ ವಾಗಿರುವುದರಿಂದ , ದಿನಾಂಕ 10.06.2005 ರಿಂದ ಖರೀದಿ ಚಟುವಟಿಕೆಯಲ್ಲಿ ತೊಡಗಿರುವುದಿಲ್ಲ. ಈಗ ಕವಿಪ್ರನಿನಿಯು ಸಂಪೂರ್ಣ ಸರ್ಕಾರಿ ಸ್ವಾಮ್ಯದ ಸಂಸ್ಥೆ ಯಾಗಿದ್ದು ರೂ. 3000 ಕೋಟಿ ಅಧಿಕೃತ ಷೇರು ಬಂಡವಾಳ ಹೊಂದಿದೆ.

**ಆ)** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ತನ್ನ ಕರ್ತವ್ಯಗಳನ್ನು ವಿದ್ಯುತ್ ಕಾಯಿದೆ 2003 ರ ಪರಿಚ್ಛೇದ 39 ಮತ್ತು 40ರ ಪ್ರಕಾರ ನಿಭಾಯಿಸುತ್ತಿದೆ ಹಾಗೂ ರಾಜ್ಯದ ವಿದ್ಯುತ್ ಜಾಲದ ನಿರ್ವಹಣೆಯನ್ನು ಮಾಡುವ ಜವಾಬ್ದಾರಿಯನ್ನು ಸಹಾ ಹೊಂದಿದೆ.

**ಇ)** ಕರ್ನಾಟಕ ರಾಜ್ಯದ 1.92 ಲಕ್ಷ ಚ.ಕಿ.ಮೀಗಳ ವಿಸ್ತೀರ್ಣದ ಉದ್ದಗಲಕ್ಕೂ ಹರಡಿರುವ 231 ಲಕ್ಷ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡುವ ಕಾರ್ಯದಲ್ಲಿ ವಿಸಕಂಗಳಿಗೆ ಕವಿಪ್ರನಿನಿಯು ಸಹಾಯ ಮಾಡುತ್ತಿದೆ. ಈ ಕಾರ್ಯದಲ್ಲಿ ನೆರವಾಗಲು ಕವಿಪ್ರನಿನಿಯು 1116 ಸಬ್ ಸ್ಟೇಷನ್‌ಗಳನ್ನು ಹಾಗು 35117 ಕಿ.ಮೀ ಗಳಷ್ಟು 66 ಕೆ.ವಿ ಮೇಲ್ಪಟ್ಟ ಪ್ರಸರಣಾ ಜಾಲವನ್ನು ಹೊಂದಿದೆ. ಸುಲಲಿತ ನಿರ್ವಹಣೆಗಾಗಿ ಮುಖ್ಯ ಇಂಜಿನಿಯರ್ ನೇತೃತ್ವದ 6 ಪ್ರಸರಣ ವಲಯ, ಅಧೀಕ್ಷಕ ಇಂಜಿನಿಯರ್ ನೇತೃತ್ವದ 16 ವೃತ್ತ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್ ನೇತೃತ್ವದ 47 ವಿಭಾಗಗಳ ರಚನೆಯನ್ನು ಹೊಂದಿದೆ. ಪ್ರಸರಣ ಜಾಲದ ಮಾರ್ಗಗಳು ಮತ್ತು ಸ್ಟೇಷನ್‌ಗಳ ನಿರ್ವಹಣೆ ಹಾಗು ಪ್ರಸರಣ ಜಾಲದ ನಿರ್ಮಾಣ, ಈ ಕಾರ್ಯಗಳನ್ನು ಮೇಲೆ ತಿಳಿಸಿರುವ ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ.

**ಈ)** 32 ಪ್ರಸರಣ ಮಾರ್ಗ ಮತ್ತು ಸಬ್ ಸ್ಟೇಷನ್ ನಿರ್ವಹಣಾ ವಿಭಾಗಗಳು ಮತ್ತು 15 ಪ್ರಸರಣ ಕಾಮಗಾರಿ ವಿಭಾಗಗಳು ಒಟ್ಟಾರೆ ನಿಗಮದ ಪ್ರಸರಣ ವ್ಯವಸ್ಥೆಯ ಜವಾಬ್ದಾರಿ ಹೊತ್ತಿವೆ.

**ಉ)** ಕವಿಪ್ರನಿನಿಯಲ್ಲಿ ಒಟ್ಟು 14 ರಿಲೇ ಟೆಸ್ಟಿಂಗ್ ವಿಭಾಗಗಳಿವೆ ಮತ್ತು 4 ರಿಲೇ ಟೆಸ್ಟಿಂಗ್ ವೃತ್ತಗಳಿವೆ. ಈ ವಿಭಾಗಗಳು ಕವಿಪ್ರನಿನಿಯ ಉಪಕೇಂದ್ರಗಳಲ್ಲಿರುವ ರಕ್ಷಣಾ ರಿಲೇಗಳು, ಮೀಟರ್‌ಗಳು ಕಾಲಿಕ ನಿರ್ವಹಣೆ ಮಾಡುತ್ತವೆ ಮತ್ತು ತೀವ್ರ ಸ್ವರೂಪದ ತೊಂದರೆಗಳನ್ನು ಬಗೆಹರಿಸುತ್ತವೆ. ಇದರೊಂದಿಗೆ ಸಬ್ ಸ್ಟೇಷನ್‌ಗಳ ಪ್ರೀಕಮಿಷನಿಂಗ್ ಪರೀಕ್ಷೆ ಮತ್ತು ಇಂಟರ್‌ಫೇಸ್ ಮೀಟರ್‌ಗಳ ಕ್ಯಾಲಿಬ್ರೇಷನ್ ಸಹಾ ಮಾಡುತ್ತವೆ.

**ಊ)** ಪ್ರತ್ಯೇಕ ಹಾಟ್ ಲೈನ್ ವೃತ್ತಗಳು ಮತ್ತು ವಿಭಾಗಗಳನ್ನು ಸ್ಥಾಪಿಸಲಾಗಿದ್ದು ಜೀವಂತ ಮಾರ್ಗಗಳ (ಲೈವ್ ಲೈನ್) ದುರಸ್ತಿ / ನಿರ್ವಹಣೆಯನ್ನು ಮಾಡುತ್ತಿವೆ. ಇದರಿಂದ ಲೈನ್ ಕ್ಲಿಯರ್ ತೆಗೆದುಕೊಳ್ಳುವ ಪ್ರಮೇಯ ಬರುವುದಿಲ್ಲ. ಹಾಟ್ ಸ್ಟಿಕ್ ವಿಧಾನ ಬಳಸಿ ಒಡೆದ / ತೂತುಬಿದ್ದ ಇನ್ಸುಲೇಟರ್ ಬದಲಾಯಿಸಲಾಗುತ್ತದೆ ಹಾಗು ಇದೇ ವಿಧಾನದಿಂದ ಶಿಥಿಲಗೊಂಡ ಜಂಪ್ ಗಳನ್ನು ಬದಲಾಯಿಸಿ ಸಬ್ ಸ್ಟೇಷನ್‌ಗಳೊಂದಿಗೆ ಶೀಘ್ರ ಸಂಪರ್ಕ ಕಲ್ಪಿಸಲಾಗುತ್ತದೆ. ಹಾಟ್ ಲೈನ್ ವಿಭಾಗಗಳು, ಪದೇ ಪದೇ ಅಡಚಣೆಗೆ ಕಾರಣವಾಗುವ “ ತಾಪ ಸ್ಥಳ” (ಹಾಟ್ ಸ್ಪಾಟ್) ಗಳನ್ನು ಗುರುತಿಸಿ ತ್ವರಿತ ಪರಿಹಾರ ಕ್ರಮ ಜರುಗಿಸುತ್ತವೆ.

**ಋ)** ಕವಿಪ್ರನಿನಿಯ ಹಣಕಾಸು ಮತ್ತು ಲೆಕ್ಕಗಳನ್ನು ನಿಗಮ ಕಚೇರಿಯಲ್ಲಿರುವ ಲೆಕ್ಕ ಮತ್ತು ಸಂಪನ್ಮೂಲ ಶಾಖೆಯು ನಿರ್ವಹಿಸುತ್ತದೆ. ಈ ಶಾಖೆಯ ಮಾರ್ಗದರ್ಶನದಲ್ಲಿ 79 ಲೆಕ್ಕ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಹಣಕಾಸು ಮತ್ತು ಲೆಕ್ಕ ಶಾಖೆಯು ಕವಿಪ್ರನಿನಿಯ ವಿವಿಧ ಯೋಜನೆಗಳಿಗೆ ಸೂಕ್ತ ಹಣಕಾಸು ವ್ಯವಸ್ಥೆಯನ್ನು ಸೂಕ್ತ ಕಾಲದಲ್ಲಿ ಮಾಡುತ್ತದೆ ಹಾಗೂ ಎಲ್ಲಾ ಚಟುವಟಿಕೆಗಳ ಲೆಕ್ಕವನ್ನು ವ್ಯವಸ್ಥಿತವಾಗಿ ದಾಖಲಿಸುತ್ತದೆ.

ಎ) ವಲಯಮಟ್ಟದ ಹಣಕಾಸು ನಿರ್ವಹಣೆಯನ್ನು ಆಯಾ ವಲಯದ ನಿಯಂತ್ರಣಾಧಿಕಾರಿಗಳು ಕ್ರಮಬದ್ಧವಾಗಿ ನಡೆಸುತ್ತಾರೆ.

ಏ) ಕವಿಪನಿನಿಯ ಎಲ್ಲಾ ಚಟುವಟಿಕೆಗಳನ್ನು ಆಂತರಿಕ ಲೆಕ್ಕ ಪರಿಶೋಧನೆ ತಂಡವು ಆರ್ಥಿಕ ಸಲಹೆಗಾರರು (ಆಂ.ಪ) ಅವರ ನೇತೃತ್ವದಲ್ಲಿ ನಡೆಸುತ್ತದೆ.

ಐ) ಕವಿನಿ ಆಯೋಗ ನಿಯಮಾವಳಿ ( ರೆಗ್ಯುಲೇಷನ್) ಗಳಿಗೆ ಸಂಬಂಧಿಸಿದ ಎಲ್ಲಾ ಕಾರ್ಯಚಟುವಟಿಕೆಯನ್ನು ಆರ್ಥಿಕ ಸಲಹೆಗಾರರು, (ನಿಯಂತ್ರಣ ವ್ಯವಹಾರಗಳು) ರವರು ನಡೆಸುತ್ತಾರೆ.

ಒ) ಕವಿಪ್ರನಿನಿಯ ಪ್ರಮುಖ ಆದಾಯವು ಪ್ರಸರಣ ದರದಿಂದ ಬರುತ್ತದೆ. ಈ ಆದಾಯವು 2016–17 ನೇ ಸಾಲಿನಲ್ಲಿ ಪರಿಶೋಧಿತ ಲೆಕ್ಕದ ಪ್ರಕಾರ ರೂ. 3086.33 ಕೋಟಿ ಆಗಿರುತ್ತದೆ.

ಓ) ರಾಜ್ಯದಲ್ಲಿ ಕವಿಪ್ರನಿನಿಯ ಎಲ್ಲಾ ಉಪಕೇಂದ್ರಗಳಲ್ಲಿನ ಸ್ಥಾಪಿತ ಸಾಮರ್ಥ್ಯವು 56462 ಎಂ.ವಿ.ಎ ಆಗಿರುತ್ತದೆ. (2464 ಪರಿವರ್ತಕಗಳಿಂದ). 2016–17 ನೇ ಸಾಲಿನಲ್ಲಿ 10242 ಮೆ.ವ್ಯಾಟ್‌ಗಳ ಪೀಕ್ ಲೋಡ್ ಅನ್ನು ಕವಿಪ್ರನಿನಿ ನಿಭಾಯಿಸಿದೆ.

# ಧ್ಯೇಯೋದ್ದೇಶ

ತನ್ನ ಗ್ರಾಹಕರಿಗೆ ಸ್ಪರ್ಧಾತ್ಮಕ ದರದಲ್ಲಿ ವಿಶ್ವಸನೀಯ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದನ್ನು ಖಚಿತಪಡಿಸುವುದೇ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ದೇಶ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಧ್ಯೇಯೋದ್ದೇಶವನ್ನು ಇವುಗಳ ಮೂಲಕ ಕೈಗೂಡಿಸಿಕೊಳ್ಳಲು ಪಣ ತೊಟ್ಟಿದೆ.

1. ಉತ್ತಮ ಕಾರ್ಯಾಚರಣೆ ಪ್ರಸರಣೆ ಮತ್ತು ವಿತರಣೆ
2. ತನ್ನ ಎಲ್ಲ ತಾಂತ್ರಿಕ ಸೌಲಭ್ಯಗಳ ಉನ್ನತ ಮಟ್ಟದಲ್ಲಿ ನಿರ್ವಹಣೆ
3. ಗ್ರಾಹಕರ ಸೇವೆಯಲ್ಲಿ ಉತ್ತಮ ಮಟ್ಟಕ್ಕೆ ಆದ್ಯತೆ.

ದೇಶದಲ್ಲೇ ಅತ್ಯುತ್ತಮ ವಿದ್ಯುತ್ ಸಂಸ್ಥೆಯಾಗಲು ಕವಿಪ್ರನಿನಿ ತನ್ನೆಲ್ಲಾ ಗ್ರಾಹಕರ ಹಿತಕ್ಕಾಗಿ ತನ್ನೆಲ್ಲಾ ಮಾನವ ಹಾಗೂ ತಾಂತ್ರಿಕ ಸಂಪನ್ಮೂಲಗಳನ್ನು ಉತ್ತಮಗೊಳಿಸಲು ಕಂಕಣಬದ್ಧವಾಗಿದೆ.

# ಅಧ್ಯಾಯ – 2

## 2.0 ಕ.ವಿ.ನಿ ಆಯೋಗದ ನಿರ್ದೇಶನಗಳು :

ಆಯೋಗದ ನಿರ್ದೇಶನಗಳನ್ನು ಜಾರಿಗೊಳಿಸಲು ಕವಿಪ್ರನಿನಿಯು ನಿರಂತರವಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ಗ್ರಿಡ್ ನಿರ್ವಹಣೆ , ಬಂಡವಾಳ ಕಾಮಗಾರಿ ಮತ್ತು ಆರ್ಥಿಕ ವ್ಯವಹಾರಗಳ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ. ಈ ಕೆಳಕಂಡ ಪ್ಯಾರಾಗಳಲ್ಲಿ ಕವಿಪ್ರನಿನಿಯು ನಿರ್ದೇಶನ ಅನುಷ್ಠಾನಗೊಳಿಸಿರುವ ವಿವರಗಳನ್ನು ಮತ್ತು ಇತ್ತೀಚಿನ ಪ್ರಗತಿಯನ್ನು ವಿವರಿಸಿದೆ. ಮಾನ್ಯ ಆಯೋಗವು ಸಹಾ ನಿರ್ದೇಶನ ಜಾರಿಗೊಳಿಸುವ ಕಾರ್ಯವು ನಿರಂತರವಾಗಿ ನಡೆಯುವ ಕ್ರಿಯೆ ಎಂದು ಅಭಿಪ್ರಾಯ ಪಟ್ಟಿದೆ.

ಮಾನ್ಯ ಆಯೋಗವು ತನ್ನ ದಿನಾಂಕ 11.04.2017ರ ದರಾದೇಶದಲ್ಲಿ ಈ ಕೆಳಕಂಡ ನಿರ್ದೇಶನಗಳನ್ನು ಕವಿಪ್ರನಿನಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದೆ.

## 2.1 ನಿರ್ದೇಶನ: ರಿಯಾಕ್ಟೀವ್ ಪವರ್ ಕಾಂಪನ್ಸೇಷನ್ ಮತ್ತು ವಿಫಲಗೊಂಡ ಕೆಪಾಸಿಟರ್ ಗಳ ಪುನರ್ಸ್ಥಾಪನೆ :

ಅ) ಮಾರ್ಚ್ 2017 ರ ಒಳಗೆ ವಿಫಲಗೊಂಡ 772.82 ಎಂವಿಎಆರ್ ಸಾಮರ್ಥ್ಯದ ಕೆಪಾಸಿಟರ್ ಗಳನ್ನು ಬದಲಾಯಿಸುವುದು.

ಆ) ಬೆಂಗಳೂರು ಪ್ರಸರಣ ಜಾಲದ ಒತ್ತಡ ನಿವಾರಣೆಗಾಗಿ 11 ಕೆ.ವಿ ವರ್ಗದ ಕೆಪಾಸಿಟರ್ ಬ್ಯಾಂಕ್ ಗಳನ್ನು ಸ್ಥಾಪಿಸುವ ಕಾರ್ಯವನ್ನು ಚುರುಕು ಗೊಳಿಸುವುದು.

ಇ) ವಿಫಲಗೊಂಡ ಎಲ್ಲಾ ಕೆಪಾಸಿಟರ್ ಗಳನ್ನು ನಿರ್ದಿಷ್ಟ ಅವಧಿಯಲ್ಲಿ ಬದಲಾಯಿಸುವುದು ಹಾಗು ಮಾಸಿಕ ವರದಿ ಕಳುಹಿಸುವುದು.

**ಅನುಸರಣೆ :**

ಅ) ಮಾರ್ಚ್ 2017 ರ ಅಂತ್ಯಕ್ಕೆ 738.101 **ಎಂ.ವಿ.ಎ.ಆರ್** ಪ್ರಮಾಣದ ಕೆಪಾಸಿಟರ್ ಗಳನ್ನು ಬದಲಾಯಿಸಿದೆ.

ಆ) ಬೆಂಗಳೂರು ಪ್ರಸರಣ ಜಾಲದ ಒತ್ತಡ ನಿವಾರಣೆಗಾಗಿ 11 ಕೆ ವಿ ವರ್ಗದ ಕೆಪಾಸಿಟರ್ ಬ್ಯಾಂಕ್ ಗಳನ್ನು ಸ್ಥಾಪಿಸುವ ಕಾರ್ಯವನ್ನು 2016–17 ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಸುಮಾರು 351 ಎಮ್.ವಿ.ಎ.ಆರ್ ಸಾಮರ್ಥ್ಯದ ಕೆಪಾಸಿಟರ್ ಬ್ಯಾಂಕ್‌ಗಳನ್ನು ಸ್ಥಾಪಿಸಲು ಕ್ರಮ ಜರುಗಿಸಲಾಗಿದೆ.

ಇ) ವಲಯ ಮುಖ್ಯ ಇಂಜಿನಿಯರ್‌ಗಳು ವಿಫಲಗೊಂಡ ಕೆಪಾಸಿಟರ್‌ಗಳನ್ನು ಬದಲಾಯಿಸಲು ಕಾಲಕಾಲಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

**2.2 ನಿರ್ದೇಶನ: ಪ್ರಸರಣ ಜಾಲದ ಲಭ್ಯತೆ – ಮಾಸಿಕ ವರದಿ.** ಆಯೋಗವು ಈ ಕೆಳಕಂಡ ನಿರ್ದೇಶನಗಳನ್ನು ನೀಡಿದೆ :

ಅ) ವಿದ್ಯುತ್ ಸರಬರಾಜಿನಲ್ಲಿ ಖಚಿತತೆಯನ್ನು ನಿಶ್ಚಿತಗೊಳಿಸುವ ನಿಟ್ಟಿನಲ್ಲಿ, ಕವಿಪ್ರನಿನಿಯು ಪ್ರಸರಣ ವ್ಯವಸ್ಥೆಯ ಮೂಲ ಪರಿಕರಗಳನ್ನು ಸುಸ್ಥಿತಿಯಲ್ಲಿಡಲು ನಿಯತಕಾಲಿಕವಾಗಿ ನಿರ್ವಹಣೆ ಹಾಗೂ ಸ್ಟೇಷನ್ ಸಾಧನಗಳ ಕಂಡೀಷನ್ ಮಾನಿಟರಿಂಗ್ ನಡೆಸುವುದಷ್ಟೇ ಅಲ್ಲದೇ ಹಳೆಯ ಸಾಧನಗಳ ಉಳಿದ ಅವಧಿಯ ಅಂದಾಜು ಪರೀಕ್ಷೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಆ) ರಾಜ್ಯ ವಿದ್ಯುತ್ ರವಾನೆ ಕೇಂದ್ರದಿಂದ ಧೃಢೀಕೃತಗೊಂಡ ಪ್ರಸರಣ ಜಾಲದ ಲಭ್ಯತೆಯ ಮಾಸಿಕ ವರದಿಯನ್ನು ಕಳುಹಿಸುವುದು.

**ಅನುಸರಣೆ :**

ಅ) ಪ್ರಸರಣ ವ್ಯವಸ್ಥೆಯ ಮೂಲ ಪರಿಕರಗಳ ನಿಯಮಿತ ಪಾಲನೆಯನ್ನು ಟಿಎಲ್ ಅಂಡ್ ಎಸ್ ಎಸ್ ವಿಭಾಗಗಳು ಮಾಡುತ್ತಿವೆ. ಹಾಗು ಹಳೆಯ / ಶಿಥಿಲ ಗೊಂಡ ಸಾಧನಗಳ ಬದಲಾವಣೆ/ ಊರ್ಜಿತ ಗೊಳಿಸುವ ಕಾರ್ಯವನ್ನೂ ಸಹಾ ನಿಯಮಿತವಾಗಿ ಮಾಡಲಾಗುತ್ತಿದೆ.

ಆ) 2016–17 ನೇ ಸಾಲಿನ, ರಾಜ್ಯ ವಿದ್ಯುತ್ ರವಾನೆ ಕೇಂದ್ರದಿಂದ ಧೃಢೀಕೃತಗೊಂಡ ವಾರ್ಷಿಕ ಪ್ರಸರಣ ಜಾಲದ ಲಭ್ಯತೆಯ ವಿವರಗಳನ್ನು ಕವಿಪ್ರನಿನಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ36/21474/2016–17/239–43 ದಿನಾಂಕ 31.07.2017 ರಲ್ಲಿ ಕ.ವಿ.ನಿ ಆಯೋಗಕ್ಕೆ ಕಳುಹಿಸಲಾಗಿದೆ. ಮುಂದುವರೆದು, ಪ್ರಸರಣ ಜಾಲದ ಲಭ್ಯತೆಯನ್ನು ಏಪ್ರಿಲ್, ಮೇ ಮತ್ತು ಜೂನ್–2017ರ ಮಾಹೆಗಳಿಗೆ ಕವಿಪ್ರನಿನಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ36/70603/2017–18/305 ದಿನಾಂಕ 20.09.2017 ರಲ್ಲಿ ಸಲ್ಲಿಸಲಾಗಿದೆ.

## 2.3 ನಿರ್ದೇಶನ: ರಾಜ್ಯದೊಳಗಿನ ಎಬಿಟಿ ಅನುಷ್ಠಾನ :

ರಾಜ್ಯದೊಳಗಿನ ಎಬಿಟಿಯನ್ನು ಪೂರ್ಣ ಅನುಷ್ಠಾನಕ್ಕೆ ತರಲು ಕವಿಪ್ರನಿನಿ ಮತ್ತು ವಿಸಕಂಗಳು ಸೂಕ್ತ ಕ್ರಮ ತೆಗೆದುಕೊಂಡು, ಈ ಆದೇಶದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ವರದಿ ಸಲ್ಲಿಸುವುದು ತದನಂತರ ಮಾಹೆಯಾನ ವರದಿ ಸಲ್ಲಿಸುವುದು.

**ಅನುಸರಣೆ :**

ಈ ಬಗ್ಗೆ ಅನುಸರಣೆ ವರದಿಯನ್ನು ಕವಿಪ್ರನಿನಿಯು, ಕ.ವಿ.ನಿ ಆಯೋಗವು ನಡೆಸಿದ ಮೊದಲ ಮತ್ತು ಎರಡನೇ ತ್ರೈಮಾಸಿಕ ಸಭೆಯಲ್ಲಿ ನೀಡಿದೆ ಹಾಗೂ ಈ ಸಂಬಂಧ ಆಗಿರುವ ಪ್ರಗತಿ ಮತ್ತು ಇರುವ ತೊಂದರೆಗಳನ್ನು ಮಾನ್ಯ ಆಯೋಗದ ಗಮನಕ್ಕೆ ತರಲಾಗಿದೆ.

## 2.4 ನಿರ್ದೇಶನ: ಎನರ್ಜಿ ಆಡಿಟ್ :

ಪ್ರಸರಣ ವ್ಯವಸ್ಥೆಯಲ್ಲಿ ಉಂಟಾಗುವ ನಷ್ಟಗಳ ವಿಶ್ಲೇಷಣೆಯನ್ನು ಮುಂದುವರೆಸುವುದು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳುವುದು. ವೋಲ್ಟೇಜ್ ವರ್ಗವಾರು ನಷ್ಟಗಳ ಮಾಹೆಯಾನ ವರದಿ ಸಲ್ಲಿಸಬೇಕೆಂಬ ನಿರ್ದೇಶನವನ್ನು ಪುನರುಚ್ಚರಿಸಲಾಗಿದೆ.

**ಅನುಸರಣೆ :**

ಮಾಹೆಯಾನ ವೋಲ್ಟೇಜ್ ವರ್ಗವಾರು ನಷ್ಟಗಳ ವಿವರವನ್ನು ಪತ್ರ ಸಂಖ್ಯೆ : ಕವಿಪ್ರನಿನಿ/ಬಿ36/21458/2015–16/93–98 ದಿನಾಂಕ 30.05.2017ರಲ್ಲಿ ಕ.ವಿ.ನಿ ಆಯೋಗದವರಿಗೆ ಕಳುಹಿಸಲಾಗಿದೆ ಮತ್ತು ಸೆಪ್ಟೆಂಬರ್–2017 ಮಾಹೆಯವರೆಗಿನ ಮಾಹಿತಿಯನ್ನು ಪತ್ರ ಸಂಖ್ಯೆ : ಕವಿಪ್ರನಿನಿ/ಬಿ36/70608/2017–18/465 ದಿನಾಂಕ 27.11.2017ರಲ್ಲಿ ಸಲ್ಲಿಸಲಾಗಿದೆ.

## 2.5 ನಿರ್ದೇಶನ: ಸೇವೆಯ ಗುಣಮಟ್ಟ :

ರಾಜ್ಯದ ವಿದ್ಯುತ್ ಸ್ಥಿತಿಗತಿಯನ್ನು ಸಾಮಾನ್ಯ ಜನರ ಗಮನಕ್ಕೆ ತರುವ ಸಲುವಾಗಿ, ಕವಿಪ್ರನಿನಿ ತನ್ನ ವೆಬ್ ಸೈಟ್‌ನಲ್ಲಿ ಪ್ರತಿ ದಿನ ಲೋಡ್ ಕರ್ವ್ (ಗರಿಷ್ಠ ಮತ್ತು ಕನಿಷ್ಠ ಡಿಮಾಂಡ್ ನೊಂದಿಗೆ) ಪ್ರಕಟಿಸುವುದು. ಇದರೊಂದಿಗೆ ವಿದ್ಯುತ್ ಉತ್ಪಾದಕರ ವಿವರಗಳು ಹಾಗು ಉತ್ಪಾದನೆಯಿಂದ ಹೊರಬಿದ್ದ ವಿವರಗಳನ್ನೂ ಸಹಾ ಪ್ರಕಟಿಸುವುದು.

**ಅನುಸರಣೆ :**

ಕವಿಪ್ರನಿನಿಯ ವೆಬ್ ಸೈಟ್‌ನಲ್ಲಿ, ರಾಜ್ಯ ವಿದ್ಯುತ್ ರವಾನೆ ಕೇಂದ್ರದವರು ಮೇಲೆ ಹೇಳಿದ ವಿವರಗಳನ್ನು ಪ್ರತಿದಿನ ದೈನಂದಿನ ಲೋಡ್ ಕರ್ವ್‌ನಲ್ಲಿ ಪ್ರಕಟಿಸುತ್ತಿದ್ದಾರೆ.

## 2.6 ನಿರ್ದೇಶನ: ಬಂಡವಾಳ ಕಾಮಗಾರಿಗಳು :

2016–17 ನೇ ಸಾಲಿನ ಬಂಡವಾಳ ಕಾಮಗಾರಿಗಳ ವಾಸ್ತವಿಕ ವೆಚ್ಚ ಮತ್ತು ಆಸ್ತಿ ಬಂಡವಾಳೀಕರಣದ ವಿವರಗಳನ್ನು ವಾರ್ಷಿಕ ಕಾರ್ಯಸಾಧನೆ ಸಲ್ಲಿಸುವ ಸಮಯ ದಲ್ಲಿ ನಡೆಯುವ ಪ್ರುಡೆನ್ಸ್ ಚೆಕ್ ಸಲುವಾಗಿ ನೀಡುವುದು.

ಲೈನ್ ಮತ್ತು ಬೇ ಗಳ ಪಾಲನೆ ವೆಚ್ಚವನ್ನು ಪ್ರತ್ಯೇಕ ಲೆಕ್ಕಗಳಲ್ಲಿರಿಸುವುದು.

**<u>ಅನುಸರಣೆ :</u>**

ಅ) ಕವಿನಿ ಆಯೋಗದ ಪತ್ರ ಸಂಖ್ಯೆ : ಕ.ವಿ.ನಿ.ಆಯೋಗ/ಎಮ್/02/2017–18/1092, ದಿನಾಂಕ 04.10.2017ರ ಪತ್ರದಲ್ಲಿ, 3 ಕೋಟಿಗೂ ಅಧಿಕ ವೆಚ್ಚದ ಬಂಡವಾಳ ಕಾಮಗಾರಿ ಮುಗಿದ ನಂತರದಲ್ಲಿ ಕವಿಪ್ರನಿನಿ ಯು, ತಾವು ನೀಡಿರುವ ಮಾರ್ಗದರ್ಶಿಯ ರೀತ್ಯಾ ವಿಶ್ಲೇಶಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿದೆ. ಈ ವರದಿಯನ್ನು ಕವಿಪ್ರನಿನಿಯು ತನ್ನ ಪತ್ರ ಸಂಖ್ಯೆ : ಕವಿಪ್ರನಿನಿ/ಬಿ36/2017–18/41635/469–72 ದಿನಾಂಕ 27.11.2017ರಲ್ಲಿ ಸಲ್ಲಿಸಿದೆ.

ಆ) ಕವಿಪ್ರನಿನಿಯು ಲೈನ್ ಮತ್ತು ಬೇ ಗಳ ಪಾಲನೆ ವೆಚ್ಚವನ್ನು ಪ್ರತ್ಯೇಕವಾಗಿ ಅನುಬಂಧ 1 ರಲ್ಲಿ ಸಲ್ಲಿಸಿದೆ.

## 2.7 ನಿರ್ದೇಶನ : ಮಾನವ ಸಂಪನ್ಮೂಲ ಅಧ್ಯಯನ :

ಕವಿಪ್ರನಿನಿಯು ಮಾನವ ಸಂಪನ್ಮೂಲ ವರದಿಯ ಅಧ್ಯಯನದ ಶಿಫಾರ್ಸುಗಳ ಬಗ್ಗೆ ನಿರ್ಧಾರವನ್ನು ಅಂತಿಮ ಗೊಳಿಸಿ , ತನ್ನ ಮಾನವ ಸಂಪನ್ಮೂಲವನ್ನು ಅತ್ಯಂತ ಉಪಯುಕ್ತವಾಗಿ ಬಳಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದರ ಮೂಲಕ ನಿರ್ವಹಣಾ ವೆಚ್ಚಗಳನ್ನು ಕಡಿಮೆಗೊಳಿಸುವುದು.

**ಅನುಸರಣೆ :**

ಸದರಿ ವರದಿಯ ಮೇಲೆ ಅಂತರಿಕ ಸಮಿತಿಯ ಶಿಫಾರ್ಸುಗಳನ್ನು ಕಾರ್ಯನಿರತ ನಿರ್ದೇಶಕರುಗಳು ಪರಿಶೀಲಿಸುತ್ತಿದ್ದು. ಅನುಷ್ಠಾನಗೊಳಿಸುವ ಬಗ್ಗೆ ನಿರ್ಧರಿಸಲಾಗುವುದು.

## 2.8 ನಿರ್ದೇಶನ : ವಿದ್ಯುತ್ ಅಪಘಾತಗಳ ತಡೆ :

ಅಪಾಯಕಾರಿ ಸ್ಥಳಗಳನ್ನು ಗುರ್ತಿಸಿ ಅವುಗಳ ನಿವಾರಣಾ ಕಾರ್ಯಗಳನ್ನು ಖಾತ್ರಿಪಡಿಸಿ ಚುರುಕುಗೊಳಿಸುವುದು. ಈ ನಿಟ್ಟಿನಲ್ಲಿ

ಅ) ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ಗುರಿಯಿಟ್ಟುಕೊಂಡು ಸೂಕ್ತಕ್ರಮಜರುಗಿಸುವುದು ಹಾಗು ಈ ಕಾರ್ಯಗಳನ್ನು ನಿಯಮಿತವಾಗಿ ಪರಿಶೀಲಿಸುವುದು.

ಆ) ಕವಿಪ್ರನಿನಿಯ ಪ್ರಸರಣಾ ಮಾರ್ಗಗಳಲ್ಲಿ ಮತ್ತು ಸಬ್ ಸ್ಟೇಶನ್ ಗಳಲ್ಲಿ ವಿದ್ಯುತ್ ಅಪಘಾತ ತಡೆಗಟ್ಟಲು ರೂಪಿಸಿರುವ ಕಾರ್ಯ ಯೋಜನೆಯನ್ನು ನಿಯಮಿತವಾಗಿ ಆಯೋಗಕ್ಕೆ ಸಲ್ಲಿಸುವುದು. .

**ಅನುಸರಣೆ :**

ವಲಯ ಮುಖ್ಯ ಇಂಜಿನಿಯರ್‌ಗಳು ಈ ಕೆಲಸಗಳನ್ನು ನಿರಂತರವಾಗಿ ಗಮನವಿಟ್ಟು ನಡೆಸುತ್ತಿದ್ದಾರೆ. ವಿದ್ಯುತ್ ಅಪಘಾತಗಳ ತಡೆಗಾಗಿ ರೂಪಿಸಿರುವ ವಾರ್ಷಿಕ ಕಾರ್ಯಯೋಜನೆಯನ್ನು ಕವಿನಿಆಯೋಗಕ್ಕೆ ಪತ್ರ ಸಂಖ್ಯೆ : ಕವಿಪ್ರನಿನಿ/ ಬಿ36/70599/2017-18/372-74 ದಿನಾಂಕ 30.10.2017ರಲ್ಲಿ ಕಳುಹಿಸಲಾಗಿದೆ.

# ಅಧ್ಯಾಯ–3

## 3.0 ಆರ್ಥಿಕ ವರ್ಷ 2016–17ರಲ್ಲಿ ವಿದ್ಯುತ್ ಪ್ರಸರಣ ಮತ್ತು ನಷ್ಟಗಳು :

ಆರ್ಥಿಕ ವರ್ಷ 2016–17ರಲ್ಲಿ, ಕವಿಪ್ರನಿನಿಯ ವಿದ್ಯುತ್ ಜಾಲಕ್ಕೆ ಒಟ್ಟು 69656.938 ದ.ಯೂ, ರಾಜ್ಯದಲ್ಲಿನ ವಿದ್ಯುತ್ ಉತ್ಪಾದಕರಿಂದ ಹಾಗೂ ಅಂತರ್‌ರಾಜ್ಯ ವಿದ್ಯುತ್ ಜಾಲದಿಂದ ಬಂದಿರುತ್ತದೆ. ಒಟ್ಟು 67370.17 ದ.ಯೂ ರಾಜ್ಯ ವಿದ್ಯುತ್ ಜಾಲದಲ್ಲಿ ಸರಬರಾಜು ಕಂಪೆನಿಗಳಿಗೆ ಹಾಗು ಮುಕ್ತಮಾರ್ಗ ಬಳಕೆದಾರರಿಗೆ ಪ್ರಸರಣವಾಗಿದೆ. ಬಾಕಿ 2286.768 ದ.ಯೂ ವಿದ್ಯುತ್ ಪ್ರಸರಣ ನಷ್ಟವಾಗಿದೆ. ಇದು ಶೇಕಡ 3.283 ಆಗಿರುತ್ತದೆ.

**ಕೋಷ್ಟಕ–1**

**ಆರ್ಥಿಕ ವರ್ಷ 2016–17ರಲ್ಲಿ ವೋಲ್ಟೇಜ್ ವರ್ಗವಾರು ವಿದ್ಯುತ್ ಪ್ರಸರಣದಲ್ಲಿನ ನಷ್ಟಗಳು :** **ಶೇಕಡವಾರು**

| | |
|---|---|
| 400 ಕೆವಿ | 0.347 |
| 220 ಕೆವಿ | 1.741 |
| 110 ಕೆವಿ | 0.331 |
| 66 ಕೆವಿ | 0.865 |

**ಕೋಷ್ಟಕ–2**

**ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣ ನಷ್ಟದ ಪಥ :**

| | ಕ.ವಿ.ನಿ.ಆಯೋಗದ 30.03.2016 ದರಾದೇಶದಂತೆ ಅನುಮೋದಿತ ಶೇಕಡವಾರು ನಷ್ಟಗಳು | ವಾಸ್ತವಿಕ |
|---|---|---|
| ಮೇಲಿನ ಮಟ್ಟ | 3.67 | 3.283 |
| ಸರಾಸರಿ | 3.47 | |
| ಕೆಳ ಮಟ್ಟ | 3.27 | |

## ಕೋಷ್ಟಕ–3

## ಆರ್ಥಿಕ ವರ್ಷ 2016–17ರಲ್ಲಿ ವಿದ್ಯುತ್ ಜಾಲದ ಲಭ್ಯತೆ :

| ವಿದ್ಯುತ್ ಜಾಲದ ಲಭ್ಯತೆ | ಬಹು ವಾರ್ಷಿಕ ಜಕಾತಿ ನಿಯಮಾವಳಿ ಅನುಸಾರ ಲಭ್ಯತೆಯ ಗುರಿ, | ವಾಸ್ತವಿಕ |
|---|---|---|
| **ಶೇಕಡವಾರು** | **98%** | **99.60%** |

ವಿದ್ಯುತ್ ಪ್ರಸರಣ ಜಾಲದ ಲಭ್ಯತೆಯ ವಿವರ/ತಖ್ತೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ36/21474/2016–17/239–43 ದಿನಾಂಕ 31.07.2017 ರಲ್ಲಿ ಸಲ್ಲಿಸಿದೆ. ವಿದ್ಯುತ್ ಪ್ರಸರಣ ಜಾಲದ ಲಭ್ಯತೆಯು ನಿಗದಿ ಪಡಿಸಿದ ಲಭ್ಯತೆಯ ಗುರಿಯನ್ನು ಮೀರಿರುತ್ತದೆ. ಆಯೋಗವು ದಿನಾಂಕ 30.08.2017ರ ಪತ್ರದಲ್ಲಿ ಕೆಲವು ಅಭಿಪ್ರಯಗಳನ್ನು ವ್ಯಕ್ತಪಡಿಸಿತ್ತು ಹಾಗು ಕವಿಪ್ರನಿನಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ36/21474/2016–17/449–51 ದಿನಾಂಕ 15.11.2017 ಮತ್ತು ಪತ್ರ ಸಂಖ್ಯೆ: ಕವಿಪ್ರನಿನಿ/ಬಿ36/21474/2016–17/463 ದಿನಾಂಕ 21.11.2017 ರಂತೆ ಸ್ಪಷ್ಟೀಕರಣ ನೀಡಲಾಗಿದೆ. ನಿಗದಿ ಪಡಿಸಿದ ಗುಣ ಮಟ್ಟಕ್ಕಿಂತ ಉತ್ತಮವಾಗಿ ನಿರ್ವಹಣೆ ಮಾಡಿರುವುದರಿಂದ ಕವಿಪ್ರನಿನಿಯು ಬಹು ವಾರ್ಷಿಕ ಜಕಾತಿ ನಿಯಮಾವಳಿ ಅನುಸಾರ ಮೇಲಿನ ಕರಾರು ನಿಯತಾಂಕಗಳಂತೆ ಪ್ರೋತ್ಸಾಹ ಧನವನ್ನು ಮಂಜೂರು ಮಾಡಬೇಕಾಗಿ ಗೌರವಾನ್ವಿತ ನಿಯಂತ್ರಣ ಆಯೋಗಕ್ಕೆ ಕೋರಲಾಗಿದೆ.

# ಅಧ್ಯಾಯ–4

## 4.0 ಆರ್ಥಿಕ ವರ್ಷ 2016–17 ರಲ್ಲಿ ಕವಿಪ್ರನಿನಿಯ ಕಾರ್ಯಸಾಧನೆ :

## 4.1 ಕವಿಪ್ರನಿನಿಯ 2016–17 ರ ಅರ್ಥಿಕ ಸಾಧನೆಗಳು :

**ಕೋಷ್ಟಕ–4**

**ಆರ್ಥಿಕ ವರ್ಷ 2016–17ರ ಅರ್ಥಿಕ ಸಾಧನೆಗಳು :** ಮೊತ್ತ ರೂ. ಕೋಟಿಗಳಲ್ಲಿ

| ಕ್ರಮ ಸಂಖ್ಯೆ. | ವಿವರಗಳು | ಕ.ವಿ.ನಿ.ಆಯೋಗ ಅನುಮೋದಿತ ಜಕಾತಿ ಆದೇಶ 30.03.2016 ರಂತೆ | ಲೆಕ್ಕಪರಿಶೋಧನೆಗೆ ಒಳಪಡಿಸಲಾದ ವಾಸ್ತವಿಕ ವಾರ್ಷಿಕ ವೆಚ್ಚಗಳು |
|---|---|---|---|
| 1. | ಕಾರ್ಯ ಮತ್ತು ಪಾಲನೆ ವೆಚ್ಚ: | | |
| ಅ) | ಸಿಬ್ಬಂದಿ ವೆಚ್ಚ | | 720.18 |
| ಆ) | ಪಾಲನ ಮತ್ತು ದುರಸ್ತಿ ವೆಚ್ಚ | | 191.90 |
| ಇ) | ಆಡಳಿತ ಮತ್ತು ಇತರೆ (ಜನರಲ್) ವೆಚ್ಚಗಳು | | 91.19 |
| | ಒಟ್ಟು ಕಾರ್ಯ ಮತ್ತು ಪಾಲನ ಖರ್ಚು ವೆಚ್ಚಗಳು | **1117.21** | **1003.27** |
| 2. | ಸವಕಳಿ | 683.69 | 663.77 |
| 3. | ಹಣಕಾಸು ವೆಚ್ಚಗಳು | 574.30 | 450.87 |
| 4. | ಕಾರ್ಯವಾಹಿ (ಕೆಲಸದ) ಬಂಡವಾಳದ ಬಡ್ಡಿ | 83.23 | 0 |
| 5. | ಈಕ್ವಿಟಿ ಮೇಲಿನ ಗಳಿಕೆ | 572.71 | 428.92 |
| 6. | ಇತರೆ ಡೆಬಿಟ್ | 0 | 15.62 |
| 7. | ಅಸಾಧಾರಣ ಬಾಬ್ತುಗಳು # | 0 | (467.52) |
| 8. | ಹಿಂದಿನ ಅವಧಿಯ ಶುಲ್ಕಗಳು | 0 | (98.57) |
| 9. | ಆದಾಯ ತೆರಿಗೆ | 0 | 618.44 |
| | ಒಟ್ಟು ವೆಚ್ಚಗಳು | **3031.14** | **3082.33** |
| | ಕಡಿತಗಳು | | |
| 10. | ಬಡ್ಡಿ ಮತ್ತು ಹಣಕಾಸು ವೆಚ್ಚಗಳನ್ನ ಬಂಡವಾಳಿಕರಿಸುವುದು | 45.36 | 68.61 |
| 11. | ಇತರ ವೆಚ್ಚಗಳನ್ನ ಬಂಡವಾಳಿಕರಿಸುವುದು | 47.09 | 33.63 |
| 12. | ಇತರೆ ಆದಾಯ | 48.44 | 231.55 |
| 13. | ಆರ್ಥಿಕ ವರ್ಷ 2014–15 ರ ಕೊರತೆ | 202.52 | 0 |
| 14. | ನಿವ್ವಳ ವಾರ್ಷಿಕ ಕಂದಾಯ ಅವಶ್ಯಕತೆ (ಎ.ಆರ್.ಆರ್) | **3092.77** | **2748.54** |
| 15. | ಪ್ರಸರಣ ಆದಾಯ | | **3086.33** |
| 16. | ಆದಾಯ ಹೆಚ್ಚಳ | | **337.79** |

# ಈ ಮೊತ್ತವು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಕೊಡಬೇಕಾದ ವಿದ್ಯುತ್ ಖರೀದಿ ವೆಚ್ಚದ

ಮೇಲಿನ ಬಡ್ಡಿಯಾಗಿರುತ್ತದೆ. ಕ.ವಿ.ನಿ. ಆಯೋಗವು ಈವರೆಗಿನ ದರಾದೇಶಗಳಲ್ಲಿ, ವಿದ್ಯುತ್ ಖರೀದಿ ಸಂಬಂಧಿತ ವೆಚ್ಚಗಳನ್ನು ಅನುಮೋದಿಸುತ್ತಿರಲಿಲ್ಲ. ಹಾಗಾಗಿ, ಈ ವೆಚ್ಚವನ್ನು ವಾರ್ಷಿಕ ಕಂದಾಯ ಅವಶ್ಯಕತೆಯಲ್ಲಿ ಪರಿಗಣಿಸಲಾಗಿಲ್ಲ.

## ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣದಿಂದ ಗಳಿಸಿದ ಕಂದಾಯ – ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಗಾಗಿ :

### ಕೋಷ್ಠಕ–5

**(ಮೊತ್ತ ರೂ. ಕೋಟಿಗಳಲ್ಲಿ)**

| ವಿವರಗಳು | 2016–17 |
|---|---|
| ಆದಾಯ ಮತ್ತು ಖರ್ಚುಗಳ ಲೆಕ್ಕದ ಪ್ರಕಾರ ಒಟ್ಟು ಕಂದಾಯ | 3380.28 |
| **ಕಡಿತಗಳು** | |
| ಅ) ಇತರೆ ಆದಾಯ | 231.55 |
| ಆ) ವಿದ್ಯುತ್ ಸರಬರಾಜು ಕಂಪೆನಿಗಳಿಂದ (ಎಸ್ಕಾಂ) ಪಡೆದಿರುವ ರಿಯಾಯಿತಿಗಳು | 41.98 |
| ಇ) ವಿದ್ಯುತ್ ಸರಬರಾಜು ಕಂಪೆನಿಗಳಿಗೆ ಸಂದಾಯಿಸಿರುವ ಸಹಾಯ ವಿದ್ಯುತ್ ಬಳಕೆಯ ವೆಚ್ಚಗಳು | 20.42 |
| **ನಿವ್ವಳ ಆದಾಯ** | **3086.33** |

ಮೇಲಿನ ಕೋಷ್ಠಕ–4ರ ಪ್ರಕಾರ, ಕ.ವಿ.ನಿ.ಆಯೋಗದ ದರಾದೇಶದಂತೆ ಅನುಮೋದಿತ ವಾರ್ಷಿಕ ಕಂದಾಯ ಅವಶ್ಯಕತೆ ರೂ. 3092.77 ಕೋಟಿ ಗನುಗುಣವಾಗಿ, ಲೆಕ್ಕಪರಿಶೋಧನೆಗೆ ಒಳಪಡಿಸಲಾದ ವಾರ್ಷಿಕ ಲೆಕ್ಕಾಚಾರಗಳ ಪ್ರಕಾರ ವಾಸ್ತವಿಕ ವಾರ್ಷಿಕ ಕಂದಾಯ ಅವಶ್ಯಕತೆ ರೂ. 2748.54 ಕೋಟಿ ಆಗಿರುತ್ತದೆ. ಮೇಲಿನ ಕೋಷ್ಠಕದ ಪ್ರಕಾರ, ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣದಿಂದ ಗಳಿಸಿದ ಕಂದಾಯವು ರೂ.3086.33 ಕೋಟಿ ಆಗಿರುತ್ತದೆ. ಈ ಪ್ರಕಾರ ಆರ್ಥಿಕ ವರ್ಷ 2016–17ಕ್ಕೆ ರೂ.337.79 ಕೋಟಿಗಳು ಹೆಚ್ಚಳ ಆದಾಯವು ಬಂದಿರುತ್ತದೆ.

## 4.2 ಬಂಡವಾಳ ಕಾಮಗಾರಿಗಳು – ಸಾಧನೆಗಳು :

**ಆರ್ಥಿಕ ವರ್ಷ 2016–17ರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಈ ಕೆಳಕಂಡಂತಿದೆ :**

**ಕೋಷ್ಟಕ–6**

**ಆರ್ಥಿಕ ವರ್ಷ 2016–17ರ ಬಂಡವಾಳ ಕಾಮಗಾರಿಗಳು :**

| ವಿವರಗಳು | 2016–17 | |
|---|---|---|
| | ಗುರಿ | ಸಾಧನೆ |
| ಉಪ ಕೇಂದ್ರಗಳು (ಸಂಖ್ಯೆಗಳಲ್ಲಿ) | 30 | 28 |
| ವಿದ್ಯುತ್ ಮಾರ್ಗಗಳು (ಮಾರ್ಗ ಕಿ.ಮೀಗಳಲ್ಲಿ) | 807.58 | 860.49 |
| ವೃದ್ಧೀಕರಿಸಿದ ಕಾಮಗಾರಿಗಳು | 65 | 67 |

| ಬಂಡವಾಳ ವೆಚ್ಚ (ಲೆಕ್ಕಪರಿಶೋಧನೆಗೆ ಒಳಪಡಿಸಲಾದ ವಾರ್ಷಿಕ ಲೆಕ್ಕಾಚಾರಗಳ ಪ್ರಕಾರ ರೂ. ಕೋಟಿಗಳಲ್ಲಿ) | 2016–17 |
|---|---|
| | 1701.96 |

## ಕೋಷ್ಠಕ–7

## ಆರ್ಥಿಕ ವರ್ಷ 2016–17 ರಲ್ಲಿ ಪೂರ್ಣಗೊಂಡ ಉಪ ಕೇಂದ್ರಗಳು :

| ವಿವರಗಳು | ಸಾಧನೆ (ಸಂಖ್ಯೆಗಳಲ್ಲಿ) | ಮೆ.ವ್ಯಾ ಸೇರಿಕೆ |
|---|---|---|
| **220 ಕೆವಿ** | **02** | **512.50** |
| **110 ಕೆವಿ** | **13** | **190.00** |
| **66 ಕೆವಿ** | **13** | **179.50** |
| ಒಟ್ಟು | **28** | **882.00** |

## ಕೋಷ್ಠಕ–8

## ಆರ್ಥಿಕ ವರ್ಷ 2016–17 ರಲ್ಲಿ ನಿರ್ಮಿಸಿದ / ಕಾಮಗಾರಿ ಪೂರ್ಣಗೊಂಡ ವಿದ್ಯುತ್ ಮಾರ್ಗಗಳು (ಮಾರ್ಗ ಕಿ.ಮೀಗಳಲ್ಲಿ).

| ವಿವರಗಳು | ಸೇರಿಕೆ /ಸಾಧನೆ (ಮಾರ್ಗ ಕಿ.ಮೀಗಳಲ್ಲಿ) |
|---|---|
| **400 ಕೆವಿ** | **451.40** |
| **220 ಕೆವಿ** | **129.50** |
| **110 ಕೆವಿ** | **148.80** |
| **66 ಕೆವಿ** | **152.31** |
| ಒಟ್ಟು | **882.01** |

## ಕೋಷ್ಟಕ–9

## ಆರ್ಥಿಕ ವರ್ಷ 2016–17 ರಲ್ಲಿ ವೃದ್ಧೀಕರಿಸಿದ ಕಾಮಗಾರಿಗಳು.

| ವಿವರಗಳು | ಸೇರಿಕೆ /ಸಾಧನೆ (ಸಂಖ್ಯೆಗಳಲ್ಲಿ) |
|---|---|
| 220 ಕೆವಿ | 04 |
| 110 ಕೆವಿ | 17 |
| 66 ಕೆವಿ | 46 |
| ಒಟ್ಟು | 67 |

# ಅಧ್ಯಾಯ–5

## 5.0 ಪ್ರಸರಣ ಶುಲ್ಕಗಳಿಗೆ ಮೂಲ ಕಾರಣ :

ಕವಿಪ್ರನಿನಿಯ ಧ್ಯೇಯವು ರಾಜ್ಯದಲ್ಲಿ ಸಂವಹನ ಜಾಲಕ್ಕೆ ಸ್ಥಿರ, ದೃಢವಾದ, ಅತ್ಯಂತ ವಿಶ್ವಾಸಾರ್ಹ ಮತ್ತು ಮಿತವ್ಯಯದ ರೀತಿಯಲ್ಲಿ ವಿದ್ಯುತ್ ಪ್ರಸರಣ ಮಾಡುವ ಸಾಮರ್ಥ್ಯವನ್ನು ಒದಗಿಸುವುದು. ಕವಿಪ್ರನಿನಿಯು ಧ್ಯೇಯ–2020 ರಲ್ಲಿ ದೇಶದ ವಿದ್ಯುತ್ ಪ್ರಸರಣ ಸಂಸ್ಥೆಗಳಲ್ಲಿ ಅಗ್ರಸ್ಥಾನ ಪಡೆಯುವ ಉದ್ದೇಶ/ ಧ್ಯೇಯ ಹೊಂದಿದೆ. ಈಗಾಗಲೇ ಆರ್ಥಿಕ ವರ್ಷ 2015 ರಲ್ಲಿ CBIP (Central Board Of Irrigation And Power) ಯಿಂದ ದೇಶದಲ್ಲಿ ಅತ್ಯುತ್ತಮ ವಿದ್ಯುತ್ ಪ್ರಸರಣ ಸಂಸ್ಥೆಯೆಂದು ಕವಿಪ್ರನಿನಿ ಸಾಬಿತು ಪಡಿಸಿ ಪ್ರಶಸ್ತಿ ಸ್ವೀಕರಿಸಿರುವುದು ವಾಸ್ತವಕ್ಕಿಂತ ದೂರವಾದುದಲ್ಲ.

ಪ್ರಸರಣದ ಮೂಲಭೂತ ಸೌಕರ್ಯ ಸೃಷ್ಠಿಸುವುದು ಕವಿಪ್ರನಿನಿಯ ಪ್ರಮುಖ ಚಟುವಟಿಕೆಯಾಗಿರುತ್ತದೆ ಹಾಗೂ ಬಂಡವಾಳ ಕಾಮಗಾರಿ ಯೋಜನೆಯು ಉದ್ದೇಶಿತ ಧ್ಯೇಯ ಮತ್ತು ದೃಷ್ಟಿಕೋನ ಸಾಧಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಈ ಬಂಡವಾಳ ಹೂಡಿಕೆ ಪೂರೈಸಲು, ಕವಿಪ್ರನಿನಿ ಹಣಕಾಸು ಸಂಸ್ಥೆಗಳು ನೀಡುವ ಸಾಲದ ಮೇಲೆ ಅವಲಂಬಿಸಿರುತ್ತದೆ. ಇದಕ್ಕಾಗಿ, ಕವಿಪ್ರನಿನಿಯು ಕಡಿಮೆ ಬಡ್ಡಿದರದಲ್ಲಿ ಬಂಡವಾಳ ಹೂಡಿಕೆ ಪಡೆಯಲು ಆಕ್ರಮಣಕಾರಿ ಕಾರ್ಯಕ್ರಮವನ್ನಾಧರಿಸುತ್ತಾ ಸಾಲ ಪಡೆಯುವಾಗ ಸಾಧ್ಯವಾದಷ್ಟು ನಿಯಮಗಳು ಮತ್ತು ಷರತ್ತುಗಳನ್ನಾಧರಿಸುತ್ತದೆ ಮತ್ತು ಕರ್ನಾಟಕ ಸರ್ಕಾರದಿಂದ ಕಾಲಕಾಲಕ್ಕೆ ಮೂಲಬಂಡವಾಳವನ್ನು ಹೂಡಿಕೆ ಮಾಡಲು ಕೋರಿರುತ್ತದೆ.

ಈ ಹಿನ್ನೆಲೆಯಲ್ಲಿ ಕವಿನಿ ಆಯೋಗದ ಬಹುವಾರ್ಷಿಕ ದರ ವಿನಿಯಮಗಳನ್ನಾಧರಿಸಿ, ಕವಿಪ್ರನಿನಿಯು ಅನುಮೋದಿತ ಪ್ರಸರಣ ಶುಲ್ಕವನ್ನಾಧರಿಸಿ, ಗಳಿಸಿದ ವಾಸ್ತವಿಕ ಪ್ರಸರಣ ಕಂದಾಯ ಮತ್ತು ವಾಸ್ತವಿಕ ಪ್ರಸರಣ ವೆಚ್ಚದಲ್ಲಿನ ವ್ಯತ್ಯಾಸವನ್ನು

ಪಡೆಯಲು ಆರ್ಥಿಕ ವರ್ಷ 2016–17ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿ ಸಲ್ಲಿಸಲಾಗುತ್ತಿದೆ. ಸೂಕ್ತ ಕಂದಾಯವು ಕ್ಷೇತ್ರದಲ್ಲಿ ಸಾಕಷ್ಟು ಬಂಡವಾಳ ಹೂಡಿಕೆ ಮಾಡಲು ಅನುವು ಮಾಡಿಕೊಡುತ್ತದೆ. ಕವಿನಿ ಆಯೋಗದ ನಿಯಮಗಳಂತೆ ಕವಿಪ್ರನಿನಿಯು ಈಕ್ವಿಟಿ ಮೇಲಿನ ಗಳಿಕೆ ಸೇರಿದಂತೆ ಎಲ್ಲಾ ವೆಚ್ಚಗಳನ್ನು ಪೂರ್ಣವಾಗಿ ಭರಿಸಬೇಕಾಗಿದೆ.

## 5.1 ಬಂಡವಾಳ ಹೂಡಿಕೆಯ ಕಾರ್ಯಕ್ರಮಕ್ಕೆ ಮೂಲ ಕಾರಣ :

ರಾಷ್ಟ್ರೀಯ ವಿದ್ಯುತ್ ಮಂತ್ರಾಲಯದ "ಎಲ್ಲಾರಿಗೂ ವಿದ್ಯುತ್ ಒದಗಿಸುವ " ದೃಷ್ಠಿಕೋನವನ್ನು ಸಾಧಿಸಲು, ರಾಷ್ಟ್ರೀಯ ವಿದ್ಯುತ್ ನೀತಿ ಮತ್ತು ರಾಷ್ಟ್ರೀಯ ವಿದ್ಯುತ್ ಯೋಜನೆಗಳು ಪ್ರಸರಣ ಮೂಲಭೂತ ಸೌಕರ್ಯ ಕಲ್ಪಿಸಲು ಪ್ರಧಾನ್ಯತೆ ನೀಡಿರುತ್ತದೆ. ಈ ನಿಟ್ಟಿನಲ್ಲಿ, ಕವಿಪ್ರನಿನಿಯು ಈ ಹಿಂದಿನ ವರ್ಷಗಳಂತೆ ಬರುವ ವರ್ಷದಲ್ಲಿಯೂ ಸಾಕಷ್ಟು ಬಂಡವಾಳ ಹೊಡಿಕೆ ಮಾಡಲು ಯೋಜಿಸಿರುತ್ತದೆ. ಈ ಯೋಜನೆಗಳಿಂದ ರಾಜ್ಯದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ ಸಾಧ್ಯವಾಗುವುದಲ್ಲದೆ ಸಮರ್ಥ ವಿದ್ಯುತ್ ಪ್ರಸರಣ ಮತ್ತು ರಾಜ್ಯದ ಗ್ರಾಮೀಣ ಪ್ರದೇಶಗಳಿಗೆ ಸಮಾನಂತರ ವಿದ್ಯುತ್ ಒದಗಿಸಲು ಅನುವಾಗುತ್ತದೆ.

**5.2** ಕರ್ನಾಟಕ ರಾಜ್ಯವು ಬೌಗೋಳಿಕವಾಗಿ (1,91,191 ಚದರ ಕಿಮೀ) ಹಾಗು 6.11 ಕೋಟಿ ಜನಸಂಖ್ಯೆ (2011 ಜನಗಣತಿ) ಹೊಂದಿದ್ದು ದೇಶದಲ್ಲಿನ ಜನಸಂಖ್ಯೆಯಲ್ಲಿ 5.1% ನಷ್ಟಿದ್ದು, ಭಾರತದಲ್ಲಿ ಎಂಟನೇ ದೊಡ್ಡ ರಾಜ್ಯವಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯ 34% ನಗರ ಪ್ರದೇಶದ ಜನಸಂಖ್ಯೆಯಾಗಿದ್ದು ಪ್ರಸ್ತುತ ಎಲ್ಲ ರಾಜ್ಯಗಳ ಪೈಕಿ 5ನೇ ನಗರೀಕೃತ ರಾಜ್ಯವೆಂದು ಸ್ಥಾನಗಳಿಸಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸಲುವಾಗಿ

ಕವಿಪ್ರನಿನಿಯು 220, 110 ಮತ್ತು 66 ಕೆವಿ ವಿದ್ಯುತ್ ಒತ್ತಡ ವೋಲ್ಟೇಜ್ ಹಂತಗಳಲ್ಲಿ 2016-17ರಲ್ಲಿ ಉಪಕೇಂದ್ರಗಳನ್ನು ನಿರ್ಮಿಸಲಾಗಿದೆ. ಇದಲ್ಲದೆ, 67 ವೃದ್ಧೀಕರಿಸಿದ ಕಾಮಗಾರಿಗಳು ಸಮಯದಲ್ಲಿ ಹೆಚ್ಚುವರಿ ಲೋಡ್ ಭೇಟಿ ಮತ್ತು ವೋಲ್ಟೇಜ್ ಪರಿಸ್ಥಿತಿಗಳನ್ನು ಸುಧಾರಿಸಲು. ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಸಾಮರ್ಥ್ಯ ಹೆಚ್ಚಿಸಲು 80 ವೃದ್ಧೀಕರಣ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ.

## 5.3 ಕಾಲಕಾಲಕ್ಕೆ ಖಚಿತಪಡಿಸಬೇಕಾಗಿರುವ ಭರವಸೆಯ ಆದಾಯ :

ಕವಿಪ್ರನಿನಿಯು ಅತೀ ಕಷ್ಠವಾದ ರಾಜ್ಯದ ಒಳಗಿನ ವಿದ್ಯುತ್ ಜಾಲದ ಸಮರ್ಪಣೆ ಮತ್ತು ನಿರ್ವಹಣೆಯನ್ನು ಮಾಡುತ್ತಿದೆ. ಕವಿಪ್ರನಿನಿಯು ಮುಖ್ಯವಾಗಿ ವಿದ್ಯುತ್ ಲಭ್ಯತೆ ಮತ್ತು ವ್ಯವಸ್ಥೆಯ ವಿಶ್ವಾಸಾರ್ಹತೆಯ ಸುಧಾರಣೆಗೆ ಗಮನ ಹರಿಸುತ್ತಿದೆ. ಈ ಕಾರ್ಯಗಳಿಗೆ ಸ್ಥಿರವಾದ ವೆಚ್ಚಗಳು ಉಂಟಾಗುವುದರಿಂದ ಅದನ್ನು ಭರಿಸಲು ನಿರಂತರ ಆದಾಯ ಬೇಕಾಗಿರುತ್ತದೆ. ಅದುದರಿಂದ, ವಿದ್ಯುತ್ ಪ್ರಸರಣ ನಿರ್ವಹಣೆಗೆ ತಗಲುವ ವಾಸ್ತವಿಕ ವೆಚ್ಚಗಳನ್ನು ಗ್ರಾಹಕರಿಂದ ಮರುಪಡೆಯಲು ಅಗತ್ಯವಿದೆ.

### ಕೋಷ್ಠಕ-10

### ಆರ್ಥಿಕ ವರ್ಷ 2016-17ರ ಕವಿಪ್ರನಿನಿಯ ಹಣಕಾಸಿನ ಸಾಧನೆ.

**ಮೊತ್ತ ರೂ. ಕೋಟಿಗಳಲ್ಲಿ**

| ಕ್ರ. ಸಂ. | ವಿವರಗಳು | ಪ್ರಮಾಣ ರೂ, ಕೋಟಿಗಳಲ್ಲಿ |
|---|---|---|
| 1 | ಪ್ರಸರಣ ಕಾರ್ಯಾಚರಣೆಯಿಂದ ಗಳಿಸಿದ ಕಂದಾಯ | 3083.33 |
| 2 | ವಾರ್ಷಿಕ ಕಂದಾಯ ಅವಶ್ಯಕತೆ | 2748.54 |
| 3 | ಕಂದಾಯ ಮತ್ತು ವೆಚ್ಚಗಳ ಅಂತರ ( 2-1) | 337.79 |

# ಅಧ್ಯಾಯ–6

## 6.0 ಆರ್ಥಿಕ ವರ್ಷ 2016–17ರ ವಿದ್ಯುತ್ ಪ್ರಸರಣ ವೆಚ್ಚಗಳ ವಿಭಜನೆ :

## 6.1 ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳು :

ಆರ್ಥಿಕ ವರ್ಷ 2016–17ರಲ್ಲಿ ನಿವ್ವಳ ದುರಸ್ಥಿ ಮತ್ತು ಪಾಲನೆ ವೆಚ್ಚವು ರೂ 191.90 ಕೋಟಿ ಆಗಿರುತ್ತದೆ. ಆರ್ಥಿಕ ವರ್ಷ 2015–16ರಲ್ಲಿ ದುರಸ್ಥಿ ಮತ್ತು ಪಾಲನೆ ವೆಚ್ಚವು ರೂ.153.21 ಆಗಿತ್ತು. ಕವಿಪ್ರನಿನಿಯ ವಿದ್ಯುತ್ ಜಾಲಕ್ಕೆ ಹೆಚ್ಚಿನ ಹೊಸ ಉಪ ಕೇಂದ್ರಗಳು ಮತ್ತು ಮಾರ್ಗಗಳನ್ನು ಜೋಡಿಸಲಾಗಿದ್ದು, ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳು ಹೆಚ್ಚಾಗಿದ್ದು ಮತ್ತು ಸೂಚ್ಯಾಂಕದಲ್ಲಿನ ಹೆಚ್ಚಳದಿಂದ, ಈ ವರ್ಷದಲ್ಲಿ ರೂ.38.69 ಕೋಟಿ ಕಳೆದ ವರ್ಷಕ್ಕಿಂತ ಹೆಚ್ಚಾಗಿ ಖರ್ಚು ಮಾಡಬೇಕಾಯಿತು. ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳ ವಿಭಜನೆ ಈ ಕೆಳಗಿನಂತಿದೆ :

### ಕೋಷ್ಟಕ–11

### ಆರ್ಥಿಕ ವರ್ಷ 2016–17ರ ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳು :

**ಮೊತ್ತ ರೂ. ಕೋಟಿಗಳಲ್ಲಿ**

| ಕ್ರ. ಸಂ. | ವಿವರಗಳು | 2016–17 |
|---|---|---|
| 1 | ಸ್ಥಾವರಗಳು, ಯಂತ್ರೋಪಕರಣ ಮತ್ತು ಪರಿವರ್ತಕಗಳು | 148.10 |
| 2 | ಮಾರ್ಗಗಳು, ಭೂಗತ ವಿದ್ಯುತ್ ವಾಹಕಗಳು, ಇತ್ಯಾದಿ | 23.90 |
| 3 | ಕಟ್ಟಡಗಳು | 15.37 |
| 4 | ಇತರೆ ಸಿವಿಲ್ ಕಾಮಗಾರಿಗಳು | 8.38 |
| 5 | ವಾಹನಗಳು | 0.46 |
| 6 | ಪೀಠೋಪಕರಣಗಳು ಮತ್ತು ಸ್ಥಿರ ವಸ್ತುಗಳು | 0.04 |
| 7 | ಕಚೇರಿ ಪರಿಕರಗಳು | 0.40 |
| | ಒಟ್ಟು | 196.65 |
| | ಕಳಿಕೆ: ಎಲ್ಲಾ ವಿದ್ಯುತ್ ಕಂಪನಿಗಳು ವೆಚ್ಚವನ್ನು ಹಂಚಿಕೊಂಡಿದ್ದಾರೆ | 4.75 |
| | ಒಟ್ಟು | 191.90 |

ಮೇಲ್ಕಂಡಂತೆ ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಒಟ್ಟು ರೂ.191.90 ಕೋಟಿಯನ್ನು ಸೇರಿಸಲಾಗಿದೆ.

## 6.2 ಸಿಬ್ಬಂದಿ ವೆಚ್ಚಗಳು :

ಅ) ಆರ್ಥಿಕ ವರ್ಷ 2016–17 ರಲ್ಲಿ ಸಿಬ್ಬಂದಿ ವೆಚ್ಚ ರೂ 686.55 ಕೋಟಿಯಾಗಿದ್ದು, ಆರ್ಥಿಕ ವರ್ಷ 2015–16 ರಲ್ಲಿ ರೂ 676.62 ಆಗಿದ್ದು ಪ್ರಸಕ್ತ ವರ್ಷ ಸಿಬ್ಬಂದಿ ವೆಚ್ಚ ರೂ.9.93 ಕೋಟಿಯಷ್ಟು ಹೆಚ್ಚಾಗಿದೆ.

ಆ) ಸಿಬ್ಬಂದಿ ವೆಚ್ಚಗಳ ವಿವರಗಳು ಈ ಕೆಳಕಂಡಂತಿದೆ :

### ಕೋಷ್ಟಕ–12

### ಆರ್ಥಿಕ ವರ್ಷ 2016–17ರ ಸಿಬ್ಬಂದಿ ವೆಚ್ಚಗಳ ವಿವರಗಳು :

| ಕಮ್ರ. ಸಂ. | ವಿವರಗಳು | 2016–17 (ಮೊತ್ತ ರೂ. ಕೋಟಿಗಳಲ್ಲಿ) |
|---|---|---|
| 1 | ವೇತನಗಳು (ಮೂಲ ವೇತನ) | 544.77 |
| 2 | ಬೋನಸ್ ಮತ್ತು ಎಕ್ಸ್ ಗ್ರೇಷಿಯ | 7.51 |
| 3 | ಗಳಿಸಿದ ರಜೆಯ ನಗದೀಕರಣ | 59.79 |
| 4 | ವೈದ್ಯಕೀಯ ವೆಚ್ಚಗಳು ಮರುಪಾವತಿ | 5.74 |
| 5 | ಸಹಾಯಕರಿಗೆ ಪಾವತಿ (ಮಳೆಗಾಲದ ತಂಡ) | 0.24 |
| 6 | ಸೇವಾಂತ್ಯದ ಗಳಿಕೆಗಳು | 1.27 |
| 7 | ಕವಿಪ್ರನಿನಿಯ ಪಿಂಚಣಿ ಮತ್ತು ಗ್ರಾಚುಟಿ ಟ್ರಸ್ಟಗೆ ವಂತಿಗೆ | 113.61 |
| 8 | ಗುತ್ತಿಗೆ ಸಿಬ್ಬಂದಿಯ ಭವಿಷ್ಯ ನಿಧಿ ವಂತಿಗೆ | 0.24 |
| 9 | ಪಿಂಚಣಿ ಮತ್ತು ರಜೆ ವಂತಿಗೆಗಳು | 0.06 |
| 10 | ಇತರೆ ವೆಚ್ಚಗಳು | 1.63 |
| | ಒಟ್ಟು | 734.86 |
| | ಕಳಿಕೆ : | |
| | ಎಲ್ಲ ವಿದ್ಯುತ್ ಕಂಪನಿಗಳೊಂದಿಗೆ ಹಂಚಿಕೊಂಡಿರುವ ವೆಚ್ಚಗಳು | 14.63 |
| | ಕವಿಪ್ರನಿನಿ ಭಾಗದ ಪಿಂಚಣಿ ಮತ್ತು ಗ್ರಾಚುಟಿ ಟ್ರಸ್ಟನ ವೆಚ್ಚಚಗಳು | 0.05 |
| | ಬಂಡವಾಳೀಕರಿಸಿದ ಸಿಬ್ಬಂದಿ ವೆಚ್ಚಗಳು | 33.63 |
| | **ಒಟ್ಟು** | **686.55** |

ಮೇಲ್ಕಂಡಂತೆ ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಒಟ್ಟು ರೂ.686.55 ಕೋಟಿಯನ್ನು ಸೇರಿಸಲಾಗಿದೆ.

## 6.3 ಆಡಳಿತ ಮತ್ತು ಸಾಮಾನ್ಯ ವೆಚ್ಚಗಳು :

ಆರ್ಥಿಕ ವರ್ಷ 2016-17 ರಲ್ಲಿ ಆಡಳಿತ ಮತ್ತು ಸಾಮಾನ್ಯ ವೆಚ್ಚ ರೂ 91.19 ಕೋಟಿಯಾಗಿದ್ದು, ಆರ್ಥಿಕ ವರ್ಷ 2015-16 ರಲ್ಲಿ ರೂ 70.39 ಆಗಿದ್ದು ಪ್ರಸಕ್ತ ವರ್ಷ ಆಡಳಿತ ಮತ್ತು ಸಾಮಾನ್ಯ ವೆಚ್ಚ ರೂ.20.80 ಕೋಟಿಯಷ್ಟು ಹೆಚ್ಚಾಗಿದೆ. ಹೆಚ್ಚಿದ ಮುದ್ರಣ ಮತ್ತು ಲೇಖನ ಸಾಮಾಗ್ರಿಗಳ ವೆಚ್ಚ, ಜಾಹಿರಾತುಗಳ ವೆಚ್ಚ, ವಿದ್ಯುತ್ ವೆಚ್ಚ, ಮರ ಕಡಿಯಲು ಕೊಟ್ಟ ಪರಿಹಾರ ಧನ ಹಾಗು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಂದ ಹೆಚ್ಚಿನ ವೆಚ್ಚಗಳನ್ನು ಮಾಡಬೇಕಾಯಿತು. ಆಡಳಿತ ಮತ್ತು ಸಾಮಾನ್ಯ ವೆಚ್ಚಗಳ ಸಂಪೂರ್ಣ ಮಾಹಿತಿಯು ಅನುಬಂಧ-ಟಿ7 ರಲ್ಲಿ ಸಲ್ಲಿಸಲಾಗಿದೆ.

## 6.4 ಕಾರ್ಯ ಮತ್ತು ಪಾಲನ ವೆಚ್ಚಗಳು -ಬಹುವಾರ್ಷಿಕ ನಿಯಮಗಳ ಅಡಿಯಲ್ಲಿ

ಅ) ಕಾರ್ಯ ಮತ್ತು ಪಾಲನ ವೆಚ್ಚಗಳು, ಸಿಬ್ಬಂದಿ ವೆಚ್ಚಗಳು, ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳು ಹಾಗೂ ಆಡಳಿತ ಮತ್ತು ಸಾಮಾನ್ಯ ವೆಚ್ಚಗಳನ್ನು ಒಳಗೊಂಡಿದ್ದು, ಕವಿನಿ ಆಯೋಗ ದಿನಾಂಕ 30.03.2016 ರಂದು ಹೊರಡಿಸಿರುವ ದರಾದೇಶದಲ್ಲಿ ನಿಗದಿ ಪಡಿಸಿರುವ ನಿಬಂಧನೆಗಳನುಸಾರ ಈ ಕೆಳಕಂಡಂತಿದೆ :

## ಕೋಷ್ಟಕ–13

## ಕವಿನಿ ಆಯೋಗದ ದಿನಾಂಕ 30.03.2016ರ ದರಾದೇಶದಂತೆ ಆರ್ಥಿಕ ವರ್ಷ 2016–17ಕ್ಕೆ ನಿಬಂಧನೆಗಳನುಸಾರ ಕಾರ್ಯ ಮತ್ತು ಪಾಲನೆ ವೆಚ್ಚಗಳು :

| ವಿವರಗಳು | 2016–17 |
|---|---|
| ವಿದ್ಯುತ್ ಮಾರ್ಗಗಳ ಕಾರ್ಯ ಮತ್ತು ಪಾಲನೆ ವೆಚ್ಚಗಳು (ರೂ ಲಕ್ಷಗಳಲ್ಲಿ/ಮಾ.ಕೀ.ಮಿ) | 0.73 |
| 'ಬೇ'ಗಳ ಕಾರ್ಯ ಮತ್ತು ಪಾಲನೆ ವೆಚ್ಚಗಳು (ರೂ ಲಕ್ಷಗಳಲ್ಲಿ/ ಬೇ) | 2.79 |

ಆ) ದಿನಾಂಕ 31.03.2017ರಂತೆ ಇರುವ ವಿದ್ಯುತ್ ಮಾರ್ಗಗಳ ಉದ್ದ (ಮಾ.ಕೀ.ಮಿಗಳಲ್ಲಿ) ಮತ್ತು ಉಪ ಕೇಂದ್ರಗಳಲ್ಲಿರುವ ಬೇಗಳ ವಿವರಗಳು ಕೆಳಕಂಡಂತಿದೆ :

## ಕೋಷ್ಟಕ–14

## ದಿನಾಂಕ 31.03.2017ರಂತೆ ಇರುವ ವೋಲ್ಟೇಜ್ ವರ್ಗವಾರು ವಿದ್ಯುತ್ ಮಾರ್ಗಗಳ ಪ್ರಮಾಣ.

| ವೋಲ್ಟೇಜ್ | ಪ್ರಸರಣ ಮಾರ್ಗ (ಮಾ.ಕೀ.ಮಿಗಳಲ್ಲಿ) |
|---|---|
| **400 ಕೆವಿ** | 3134 |
| **220 ಕೆವಿ** | 11078 |
| **110 ಕೆವಿ** | 10342 |
| **66 ಕೆವಿ** | 10563 |
| ಒಟ್ಟು | **35117** |

## ಕೋಷ್ಟಕ–15

### ದಿನಾಂಕ 31.03.2017ರಂತೆ ಇರುವ ಬೇಗಳ ಸಂಖ್ಯೆ :

| ವಿಧ | ಸಂಖ್ಯೆ |
|---|---|
| ಮಾರ್ಗ ಬೇ | 5318 |
| ಪರಿವರ್ತಕ ಬೇ | 2462 |
| ಪಿಟಿ ಬೇ | 1544 |
| ಕೆಪಾಸಿಟರ್ ಬ್ಯಾಂಕ್ ಬೇ | 914 |
| 11 ಕೆವಿ ಬೇ | 11497 |
| ಒಟ್ಟು | **21735** |

## ಕೋಷ್ಟಕ–16

### ಆರ್ಥಿಕ ವರ್ಷ–17ಕ್ಕೆ ಕ.ವಿ.ನಿ ಆಯೋಗದ ನಿಯಮಗಳ ಪ್ರಕಾರ ಕಾರ್ಯ ಮತ್ತು ಪಾಲನೆ ವೆಚ್ಚಗಳ ಲೆಕ್ಕಾಚಾರ :

| ವಿವರಗಳು | ದರ | ಪ್ರಮಾಣ | ಕಾರ್ಯ ಮತ್ತು ಪಾಲನೆ ವೆಚ್ಚಗಳು (ರೂ ಕೋಟಿಗಳಲ್ಲಿ) |
|---|---|---|---|
| ವಿದ್ಯುತ್ ಮಾರ್ಗಗಳಿಗೆ ಕಾರ್ಯ ಮತ್ತು ಪಾಲನೆ ವೆಚ್ಚಗಳು (ರೂ/ಮಾ.ಕೀ.ಮಿ) | 0.73 | 35117 | 256.35 |
| ಬೇಗಳ ಕಾರ್ಯ ಮತ್ತು ಪಾಲನೆ ವೆಚ್ಚಗಳು (ಲಕ್ಷ/ಬೇ) | 2.73 | 21735 | 593.36 |
| ಒಟ್ಟು | | | **849.71** |

ಕವಿನಿ ಆಯೋಗದ (ದರಗಳ ನಿಯಮಗಳು ಮತ್ತು ಷರತ್ತುಗಳು) (ಎರಡನೇ ತಿದ್ದುಪಡಿ) ವಿನಿಯಮಾವಳಿಗಳ ಪ್ರಕಾರ ಕಾರ್ಯ ಮತ್ತು ಪಾಲನ ವೆಚ್ಚಗಳು ಕೆಳಕಂಡಂತಿದೆ :

## ಕೋಷ್ಠಕ–17

## ಹೆಚ್ಚುವರಿ ಸಿಬ್ಬಂದಿ ವೆಚ್ಚಗಳು (ನಿಯಂತ್ರಿಸಲಾಗದ ಕಾರ್ಯ ಮತ್ತು ಪಾಲನ ವೆಚ್ಚಗಳು) :

| ಕ್ರಮ ಸಂಖ್ಯೆ | ವಿವರಗಳು | ಮೊತ್ತ ರೂ ಕೋಟಿಗಳಲ್ಲಿ |
|---|---|---|
| 1 | ಪಿ ಮತ್ತು ಜಿ ಟ್ರಸ್ಟ್ ಗೆ ಕವಿಪ್ರನಿನಿಯ ವಂತಿಗೆ | 87.94 |
| 2 | ಎನ್.ಡಿ.ಸಿ.ಪಿ.ಎಸ್‌ಗೆ ಕವಿಪ್ರನಿನಿಯ ವಂತಿಗೆ | 25.67 |
| 3 | ಗಳಿಕೆ ರಜಾ ನಗದೀಕರಣ | 59.79 |
| **4** | **ಒಟ್ಟು** | **173.40** |

## ಕೋಷ್ಠಕ–18

## ಆರ್ಥಿಕ ವರ್ಷ–2016–17ಕ್ಕೆ ಅನುಮೋದಿಸಬಹುದಾದ ಕಾರ್ಯ ಮತ್ತು ಪಾಲನೆ ವೆಚ್ಚಗಳು :

| ಕ್ರಮ ಸಂಖ್ಯೆ | ವಿವರಗಳು | ಮೊತ್ತ ರೂ ಕೋಟಿಗಳಲ್ಲಿ |
|---|---|---|
| **1** | ನಿಯಮಗಳ ಪ್ರಕಾರ ಕಾರ್ಯ ಮತ್ತು ಪಾಲನೆ ವೆಚ್ಚಗಳು | 849.71 |
| **2** | ಹೆಚ್ಚುವರಿ ಸಿಬ್ಬಂದಿ ವೆಚ್ಚ (ನಿಯಂತ್ರಿಸಲಾಗದ ಕಾರ್ಯ ಮತ್ತು ಪಾಲನೆ ವೆಚ್ಚಗಳು) | 173.40 |

| | | |
|---|---|---|
| | **ಒಟ್ಟು** | **1023.11** |

ಕವಿಪ್ರನಿನಿಯ ನಿಯಮಗಳ ಪ್ರಕಾರ ಲೆಕ್ಕಾಚಾರ ಮಾಡಿದ ಕಾರ್ಯ ಮತ್ತು ಪಾಲನೆ ವೆಚ್ಚಗಳು ಅಥವ ಲೆಕ್ಕಪರಿಶೋಧನೆಗೆ ಒಳಪಡಿಸಿರುವ ಲೆಕ್ಕಾಚಾರಗಳ ಪ್ರಕಾರ ವಾಸ್ತವಿಕ ಕಾರ್ಯ ಮತ್ತು ಪಾಲನೆ ವೆಚ್ಚಗಳನ್ನು ಮಂಜೂರು ಮಾಡಲು ಗೌರವಾನ್ವಿತ ಆಯೋಗಕ್ಕೆ ಕೋರಲಾಗಿದೆ.

## 6.5 ಸವಕಳಿ :

ಕವಿನಿ ಆಯೋಗವು ಅನುಮೋದಿಸಿರುವ ನಿವ್ವಳ ಸವಕಳಿ ರೂ.683.69 ಕೋಟಿಯ ಪ್ರತಿಯಾಗಿ ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ರೂ.667.70 ಕೋಟಿಗಳು ನಿವ್ವಳ ಸವಕಳಿಯೆಂದು ಸೇರಿಸಲಾಗಿದೆ. ಸವಕಳಿಯ ಪೂರ್ಣ ಮಾಹಿತಿಯು ಅನುಬಂಧ–ಟಿ–8ರಲ್ಲಿ ಸಲ್ಲಿಸಿದೆ. ಲೆಕ್ಕಪರಿಶೋಧನೆಗೆ ಒಳಪಡಿಸಲಾದ ಖಾತೆಗಳ ಅನ್ವಯ ಪ್ರಸ್ತುತ ಸವಕಳಿಯನ್ನು ಪರಿಗಣಿಸಲು ಗೌರವಾನ್ವಿತ ಆಯೋಗಕ್ಕೆ ಕೋರಲಾಗಿದೆ.

## 6.6 ಬಡ್ಡಿ ಮತ್ತು ಹಣಕಾಸು ವೆಚ್ಚಗಳು :

ಕವಿನಿ ಆಯೋಗವು ಅನುಮೋದಿಸಿರುವ ಬಡ್ಡಿ ಮತ್ತು ಹಣಕಾಸು ವೆಚ್ಚಗಳು ರೂ.574.30 ಕೋಟಿಯ ಪ್ರತಿಯಾಗಿ ವಾಸ್ತವವಾಗಿ ಲೆಕ್ಕಪರಿಶೋಧನೆಗೆ ಒಳಪಡಿಸಲಾದ ಖಾತೆಗಳ ಅನ್ವಯ ರೂ.450.87 ಕೋಟಿಗಳು ಬಡ್ಡಿ ಮತ್ತು ಹಣಕಾಸು ವೆಚ್ಚವಾಗಿರುತ್ತದೆ. ಬಡ್ಡಿ ಮತ್ತು ಹಣಕಾಸು ವೆಚ್ಚಗಳ ಪೂರ್ಣ ಮಾಹಿತಿಯು ಅನುಬಂಧ–ಟಿ–9ರಲ್ಲಿ ಸಲ್ಲಿಸಿದೆ. ಬಂಡವಾಳಕರಿಸಿದ ಬಡ್ಡಿ ರೂ.68.61 ಕೋಟಿಯನ್ನು ಲೆಕ್ಕಿಸಿ, ರೂ.382.25 ಕೋಟಿಯನ್ನು ನಿವ್ವಳ ಬಡ್ಡಿ ಮತ್ತು ಹಣಕಾಸು ವೆಚ್ಚಗಳೆಂದು ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಸೇರಿಸಲಾಗಿದೆ. ಸಾಲಗಳ ಮೇಲಿನ ಬಡ್ಡಿಯು ರೂ.123.43 ಕೋಟಿ. ಇದು ಕ.ವಿ.ನಿ ಆಯೋಗ

ಅನುಮೋದಿಸಿರುವ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಇದಕ್ಕೆ ಕಾರಣ ಸಾಲಗಳ ಉತ್ತಮ ಪಾಲನೆ, ಕಡಿಮೆ ಬಡ್ಡಿ ಸಾಲಗಳು, ಸಾಲ ವಿನಿಮಯ, ಸಕಾಲಿಕ ನಿರ್ಧಾರಗಳು. ಹೀಗಾಗಿ, ಕವಿಪ್ರನಿನಿ ದಕ್ಷ ಆರ್ಥಿಕ ನಿರ್ವಹಣಾ ತತ್ವಗಳನ್ನು ಅಳವಡಿಸಿ ಹಣಕಾಸಿನ ವೆಚ್ಚವನ್ನು ಕಡಿತ ಮಾಡಿಕೊಂಡಿದ್ದು, ತನ್ಮೂಲಕ ಗ್ರಾಹಕರ ಮೇಲಿನ ಹೊರೆಯನ್ನು ಹೆಚ್ಚಿನ ಮಟ್ಟಿಗೆ ಕಡಿಮೆ ಮಾಡಿದೆ.

ಈ ಸಾಲಗಳ ಮೇಲೆ ಕವಿಪ್ರನಿನಿಯು ವಾಸ್ತವಿಕದರದಲ್ಲಿ ಬಡ್ಡಿಯನ್ನು ಪಾವತಿ ಮಾಡಿರುವುದರಿಂದ, ಗೌರವಾನ್ವಿತ ಕವಿನಿ ಆಯೋಗವು ವಾಸ್ತವಿಕವಾಗಿ ಭರಿಸಲಾದ ಬಡ್ಡಿ ಮತ್ತು ಹಣ ಕಾಸು ವೆಚ್ಚವನ್ನು ಅನುಮೋದಿಸಬೇಕೆಂದು ಕೋರಲಾಗಿದೆ.

## 6.7 ಈಕ್ವಿಟಿ ಮೇಲಿನ ಗಳಿಕೆ :

ಗೌರವಾನ್ವಿತ ಕವಿನಿ ಆಯೋಗವು ದಿನಾಂಕ 30.03.2016ರ ದರಾದೇಶದಲ್ಲಿ ಈಕ್ವಿಟಿ ಮತ್ತು ಹೆಚ್ಚುವರಿ ಮೇಲೆ 15.5% ರೇಟ್ ಅಫ್ ರಿಟರ್ನ್‌ರಂತೆ ಈಕ್ವಿಟಿ ಮೇಲಿನ ಗಳಿಕೆ ಲೆಕ್ಕಾಚಾರ ಮಾಡಿದೆ. ಅದೇ ರೀತಿ ಅರ್ಥಿಕ ವರ್ಷ 2016–17ಕ್ಕೆ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಿದ್ದು ಕಂದಾಯ ಅವಶ್ಯಕತೆ ಅಡಿಯಲ್ಲಿ ಸೇರಿಸಲಾಗಿದೆ.

**ಕೋಷ್ಟಕ–19**

**ಆರ್ಥಿಕ ವರ್ಷ–2016–17ಕ್ಕೆ ಈಕ್ವಿಟಿ ಮೇಲಿನ ಗಳಿಕೆ**

**ಮೊತ್ತ ರೂ. ಕೋಟಿಗಳಲ್ಲಿ**

| ವಿವರಗಳು | ಅನುಮೋದಿತ ಮೊತ್ತ | ವಾಸ್ತವಿಕ ಮೊತ್ತ |
|---|---|---|
| ಪಾವತಿಸಿದ ಷೇರು ಬಂಡವಾಳ | 2075.32 | 2075.32 |
| ಷೇರು ಠೇವಣಿ | 45.00 | 107.00 |
| ರಿಸರ್ವ್ಸ್ ಮತ್ತು ಹೆಚ್ಚುವರಿ | 786.02 | 584.91 |
| ಒಟ್ಟು ಈಕ್ವಿಟಿ | **2906.34** | **2767.23** |
| ಈಕ್ವಿಟಿ ಮೇಲಿನ ಗಳಿಕೆ @15.5% (ಅನುಮೋದಿತ ಮೊತ್ತದಲ್ಲಿ ಮ್ಯಾಟ್ ಸೇರಿದೆ) | **572.71** | **428.92** |

## 6.8 ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವೆಚ್ಚಗಳು :

ಗೌರವಾನ್ವಿತ ಕವಿನಿ ಆಯೋಗದ ದಿನಾಂಕ 30.03.2016ರ ದರಾದೇಶದಲ್ಲಿ ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವೆಚ್ಚಗಳು ರೂ.23.53 ಕೋಟಿ ಅನುಮೋದಿಸಲಾಗಿದೆ ಹಾಗೂ ಈ ಎಲ್ಲಾ ವೆಚ್ಚಗಳನ್ನು ವಿದ್ಯುತ್ ಸರಬರಾಜು ಕಂಪೆನಿಗಳು ಮತ್ತು ವಿದ್ಯುತ್ ಪ್ರಸರಣ ಜಾಲದ ದೀರ್ಘಾವಧಿ ಉಪಯುಕ್ತರು ಭರಿಸಬೇಕೆಂದು ಆದೇಶಿಸಿದೆ. ಆರ್ಥಿಕ ವರ್ಷ–2016–17ಕ್ಕೆ ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವಾಸ್ತವಿಕ ವೆಚ್ಚಗಳು ರೂ.20.46 ಕೋಟಿಯಾಗಿದ್ದು, ಇದರ ವಿವರಗಳು ಕೆಳಕಂಡಂತಿದೆ :

## ಕೋಷ್ಠಕ–20

## ಆರ್ಥಿಕ ವರ್ಷ–2016–17ಕ್ಕೆ ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವೆಚ್ಚಗಳು:

**ಮೊತ್ತ ರೂ ಕೋಟಿಗಳಲ್ಲಿ**

| ವಿವರಗಳು | ಲೆಕ್ಕಪರಿಶೋಧನೆಗೆ ಒಳಪಡಿಸಲಾದ ಖಾತೆಗಳು 2016–17 ಮಾಹಿತಿ |
|---|---|
| ದುರಸ್ಥಿ ಮತ್ತು ಪಾಲನ | 0.10 |
| ಸಿಬ್ಬಂದಿ ವೆಚ್ಚ | 10.89 |
| ಆಡಳಿತ ಮತ್ತು ಸಾಮಾನ್ಯ ವೆಚ್ಚಗಳು | 9.47 |
| **ಒಟ್ಟು** | **20.46** |

ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಕಾರ್ಯ ಮತ್ತು ಪಾಲನ ವೆಚ್ಚಗಳು ಕವಿಪ್ರನಿನಿಯ ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಸೇರಿಸಲಾಗಿಲ್ಲ. ಅದುದರಿಂದ ಗೌರವಾನ್ವಿತ ಕವಿನಿ ಆಯೋಗವನ್ನು ರಾಜ್ಯ ವಿದ್ಯುತ್ ರವಾನೆ ಕೇಂದ್ರದ ವೆಚ್ಚಗಳಾದ ರೂ.20.46 ಕೋಟಿಯನ್ನು ಪ್ರತ್ಯೇಕವಾಗಿ ಅನುಮೋದಿಸಲು ಕೋರಲಾಗಿದೆ.

# ಅಧ್ಯಾಯ– 7

## 7.1 2016–17 ನೇ ಸಾಲಿನ ಕವಿಪ್ರನಿನಿಯ ವಾರ್ಷಿಕ ಆದಾಯದ ಅವಶ್ಯಕತೆ (ವಾಸ್ತವಿಕ) :

2016–17 ನೇ ಸಾಲಿನ ಪರಿಶೋಧಿತ ಲೆಕ್ಕದ ಆಧಾರದ ಮೇಲೆ ಕವಿಪ್ರನಿನಿಯ ವಾರ್ಷಿಕ ಆದಾಯದ ಅವಶ್ಯಕತೆಯ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದೆ.

### ಕೋಷ್ಟಕ –21

**ಮೊತ್ತ ಕೋಟಿ ರೂ ಗಳಲ್ಲಿ**

| ಕ್ರಮ ಸಂಖ್ಯೆ. | ವಿವರ | 2016–17 |
|---|---|---|
| 1 | ಪ್ರಸರಣ ದರದಿಂದ ಆದಾಯ | 3086.31 |
| 2 | ಇತರೆ ಆದಾಯ | 231.55 |
| | **ಒಟ್ಟು ಆದಾಯ** | **3317.86** |
| | **ವೆಚ್ಚ** | |
| 3 | ದುರಸ್ತಿ ಮತ್ತು ಪಾಲನ ವೆಚ್ಚಗಳು | 191.90 |
| 4 | ಸಿಬ್ಬಂದಿ ವೆಚ್ಚ | 720.19 |
| 5 | ಆಡಳಿತ ಮತ್ತು ಇತರೆ ವೆಚ್ಚಗಳು | 91.19 |
| 6 | ಸವಕಳಿ | 663.77 |
| 7 | ಬಡ್ಡಿ ಮತ್ತು ಆರ್ಥಿಕ ವೆಚ್ಚಗಳು | 450.87 |
| 8 | ಈಕ್ವಿಟಿ ಮೇಲಿನ ಗಳಿಕೆ | 428.92 |
| 9 | ನಿವ್ವಳ ಹಿಂದಿನ ಅವಧಿಯ ಜಮೆ | –98.57 |
| 10 | ಆದಾಯ ತೆರಿಗೆ | 618.44 |
| 11 | ಇತರೆ ಖರ್ಚು | 15.62 |
| | **ಒಟ್ಟು ವೆಚ್ಚ** | **3082.33** |
| | **ಕಡಿತಗೊಳಿಸಿದ್ದು** | |
| 13 | ಬಡ್ಡಿ ಮತ್ತು ಆರ್ಥಿಕ ವೆಚ್ಚಗಳು ಬಂಡವಾಳೀಕರಿಸಿದ್ದು | 68.61 |
| 14 | ಬಂಡವಾಳೀಕರಿಸಿದ ಇತರೆ ವೆಚ್ಚಗಳು | 33.63 |
| 15 | ಇತರೆ ಆದಾಯ | 231.55 |
| | **ನಿವ್ವಳ ಎ ಆರ್ ಆರ್** | **2748.54** |

## 7.2 ಪ್ರಸರಣ ದರದ ವಸೂಲಿ :

ಕವಿಪ್ರನಿನಿಯು ತನ್ನ ವಾಸ್ತವಿಕ ಪ್ರಸರಣ ವೆಚ್ಚದ ವಿವರಗಳನ್ನು ಮೇಲ್ಕಂಡ ಪ್ಯಾರಾಗಳಲ್ಲಿ ವಿಶ್ಲೇಶಣೆಯೊಂದಿಗೆ ನೀಡಿದೆ. ಪರಿಶೋಧಿತ ಲೆಕ್ಕಗಳ ಮೇಲೆ ಆಧರಿಸಿ 2016–17 ರ **ವಾರ್ಷಿಕ ಆದಾಯದ ಅವಶ್ಯಕತೆಯನ್ನು ದಯಮಾಡಿ ಅನುಮೋದಿಸುವಂತೆ** ಕವಿಪ್ರನಿನಿಯು ಮಾನ್ಯ ಆಯೋಗವನ್ನು ಕೋರುತ್ತದೆ.

## 7.3 ಪ್ರಸರಣ ದರದಿಂದ ಆದಾಯ :

ದಿನಾಂಕ 10.06.2005 ರಿಂದ ಕವಿಪ್ರನಿನಿಯು ಪ್ರಸರಣ ಸಂಸ್ಥೆ ಮಾತ್ರವಾಗಿದ್ದು ಅದರ ಮುಖ್ಯ ಆದಾಯದ ಮೂಲವು ಪ್ರಸರಣ ದರ ಮತ್ತು ಮುಕ್ತ ಪ್ರವೇಶ ದರಗಳು ಮಾತ್ರ ಆಗಿರುತ್ತದೆ ಆದರೆ ಒಟ್ಟು ಆದಾಯ ಎಂದು ತೋರಿಸಿರುವ ಮೊತ್ತದಲ್ಲಿ ಪ್ರಸರಣ ದರ ಮತ್ತು ಮುಕ್ತ ಪ್ರವೇಶ ದರದ ಆದಾಯ ವಷ್ಟೇ ಅಲ್ಲದೆ ದರಯೇತರ ಆದಾಯವೂ ಸಹಾ ಸೇರಿರುತ್ತದೆ.

## 7.4 ಆದಾಯ ಖಾತೆ :

2016–17 ನೇ ಸಾಲಿನಲ್ಲಿ ನ ಪ್ರಸರಣ ದರದ ಆದಾಯವು ವೆಚ್ಚಕ್ಕಿಂತ ಹೆಚ್ಚಿದೆ. ಪರಿಶೋಧಿತ ಲೆಕ್ಕದ ರೀತ್ಯಾ ವಾರ್ಷಿಕ ವೆಚ್ಚವನ್ನು ಗ್ರಾಹಕರಿಗೆ ವರ್ಗಾಯಿಸಲು ಗೌರವಾನ್ವಿತ ಆಯೋಗವು ಆದೇಶಿಸಬೇಕೆಂದು ಕವಿಪ್ರನಿನಿಯು ಕೋರುತ್ತದೆ.

ಈ ಕೆಳಕಂಡ ಕೋಷ್ಟಕವು 2016–17 ನೇ ಸಾಲಿನ **ಆದಾಯ ಖಾತೆಯ** ವಿವರಗಳನ್ನು ನೀಡುತ್ತದೆ.

## ಕೋಷ್ಟಕ–22

## ಆದಾಯ ಖಾತೆ :

**ಮೊತ್ತ ಕೋಟಿ ರೂ ಗಳಲ್ಲಿ**

| | |
|---|---|
| ಪ್ರಸರಣ ದರದಿಂದ ಆದಾಯ | 3086.33 |
| ಪರಿಶೋಧಿತ ಲೆಕ್ಕದ ರೀತ್ಯಾ ವಾರ್ಷಿಕ ವಚ್ಚ | 2748.54 |
| **ಹೆಚ್ಚಿನ ಆದಾಯ** | **337.79** |

ಗೌರವಾನ್ವಿತ ಆಯೋಗವು ಸೂಕ್ತ ಆದೇಶ ನೀಡಬೇಕೆಂದು ಕವಿಪ್ರನಿನಿಯು ಕೋರುತ್ತದೆ.

## 7.5 ದಕ್ಷತೆಯ ಲಾಭ / ನಷ್ಟಗಳ ಹಂಚಿಕೆ :

ಪ್ರಸರಣ ಜಾಲದ ಲಭ್ಯತೆ ಮತ್ತು ಪ್ರಸರಣ ನಷ್ಟಗಳಲ್ಲಿ ಕೆ,ಇ,ಆರ್.ಸಿ ಯವರು ನೀಡಿರುವ ಮಟ್ಟಕ್ಕಿಂತ ಉತ್ತಮ ಮಟ್ಟ ಸಾಧಿಸಿರುವ ಹಿನ್ನೆಲೆಯಲ್ಲಿ , ಪ್ರೋತ್ಸಾಹಕ ಮೊತ್ತವನ್ನು ನೀಡಬೇಕೆಂದು ಕವಿಪ್ರನಿನಿಯು ಕೋರುತ್ತದೆ ಹಾಗೂ ದಕ್ಷತೆಯ ಲಾಭ / ನಷ್ಟಗಳ ಹಂಚಿಕೆಯನ್ನು ಕವಿನಿ ಆಯೋಗದ ಬಹುವಾರ್ಷಿಕ ದರ ನಿಯಮ 2.7.6 ಪ್ರಕಾರ ಮಾಡಲು ಕೋರಿದೆ.

# ಅಧ್ಯಾಯ- 8

## 8.0 ವಿಸಕಂ ಗಳಿಂದ ಪ್ರಸರಣ ದರದ ಪಾವತಿ :

ರಾಜ್ಯದಲ್ಲಿರುವ ಐದು ವಿದ್ಯುತ್ ಸರಬರಾಜು ಕಂಪನಿಗಳು (ವಿಸಕಂ) ಕವಿಪ್ರನಿನಿಯ ಪ್ರಸರಣ ಜಾಲದ ಪ್ರಮುಖ ಬಳಕೆದಾರರಾಗಿರುತ್ತಾರೆ. ಈ ಕಂಪನಿಗಳು ನೀಡಬೇಕಾಗಿರುವ ಪ್ರಸರಣ ದರವನ್ನು ಮಾನ್ಯ ಕೆಇಆರ್‌ಸಿ ಯವರು ತಮ್ಮ ದರ ಆದೇಶದಲ್ಲಿ ವಾರ್ಷಿಕವಾಗಿ ನಿಗದಿಪಡಿಸುತ್ತಾರೆ ಹಾಗು ಮಾಸಿಕವಾಗಿ ಪ್ರತಿ ವಿಸಕಂ ಪಾವತಿಮಾಡಬೇಕಾದ ಮೊತ್ತವನ್ನೂ ಸಹಾ ಸೂಚಿಸಿರುತ್ತಾರೆ. ಈ ಮೊತ್ತವನ್ನು ವಿಸಕಂಗಳು ನಿಯಮಿತವಾಗಿ ಪಾವತಿಮಾಡಬೇಕಾಗಿದ್ದು , ಮಾನ್ಯ ಆಯೋಗದವರ ಅನುಮೋದನೆ ಇಲ್ಲದೆ ವ್ಯತ್ಯಯ ಮಾಡುವಂತಿಲ್ಲ.

## 8.1 ವಿಸಕಂ ಗಳು ದರ ಪಾವತಿಗೆ ಅನುಸರಿಸಿದ ವಿಧಾನ :

ಕಾನೂನು ರೀತ್ಯ ವಿದ್ಯುತ್ ಖರೀದಿ ವ್ಯವಹಾರಗಳನ್ನು ವಿಸಕಂಗಳಿಗೆ ವರ್ಗಾಯಿಸುವ ಸಂದರ್ಭದಲ್ಲಿ, ಕರ್ನಾಟಕ ಸರ್ಕಾರವು 10.05.2005 ರಲ್ಲಿ ಆದೇಶವನ್ನು ಹೊರಡಿಸಿ, ವಿಸಕಂಗಳು ಪ್ರಸರಣ ದರವನ್ನು ಎಸ್ಕ್ರೋ ಖಾತೆಯ ಮೂಲಕ ಪಾವತಿಸಬೇಕೆಂದು ಆದೇಶಿಸಿರುತ್ತಾರೆ. ಈ ಆದೇಶದ ಪ್ರತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. ಈ ಹಿನ್ನಲೆಯಲ್ಲಿ ಎಲ್ಲಾ ವಿಸಕಂಗಳು ಎಸ್ಕ್ರೋ ಖಾತೆ ತೆರೆದು ಪಾವತಿ ಮಾಡಲು ಪ್ರಾರಂಭ ಮಾಡಿದವು.

ಈ ಕೆಳಕಂಡ ಕೋಷ್ಟಕವು 2016-17 ನೇ ಸಾಲಿನಲ್ಲಿ ವಿಸಕಂಗಳು ಪಾವತಿಸಿರುವ ಪ್ರಸರಣ ದರದ ಮೊತ್ತವನ್ನು ಸೂಚಿಸುತ್ತದೆ.

## ಕೋಷ್ಟಕ- 23

## 2016–17 ರಲ್ಲಿ ವಿಸಕಂ ಗಳು ಪಾವತಿಸಿರುವ ಪ್ರಸರಣ ಮೊತ್ತದ ವಿವರ.

**ಮೊತ್ತ ಕೋಟಿ ರೂಗಳಲ್ಲಿ**

| ವಿಸಕಂ | ಬೇಡಿಕೆ | ವಸೂಲಿ | ಬಾಕಿ |
|---|---|---|---|
| ಬೆಸ್ಕಾಂ | 1565.24 | 1467.83 | 97.42 |
| ಮೆಸ್ಕಾಂ | 280.79 | 239.81 | 40.98 |
| ಸೆಸ್ಕ್ | 409.59 | 312.45 | 97.13 |
| ಹೆಸ್ಕಾಂ | 728.45 | 515.35 | 213.10 |
| ಜೆಸ್ಕಾಂ | 425.55 | 287.70 | 137.84 |
| **ಒಟ್ಟು** | **3409.62** | **2823.14** | **586.47** |

**ಬೇಡಿಕೆ ಯು ರೂ. 316.86 ಕೋಟಿ ಪ್ರಾರಂಭಿಕ ಶಿಲ್ಕನ್ನು ಒಳಗೊಡಿರುತ್ತದೆ.**

ಒಟ್ಟು ಬೇಡಿಕೆ ಮೊತ್ತವಾದ ರೂ. 3409.62 ಕೋಟಿಯಲ್ಲಿ ರೂ 586.47 ಕೋಟಿಯಷ್ಟು ಕಡಿಮೆ ಪಾವತಿಯಾಗಿರುವುದನ್ನು ಗಮನಿಸಬಹುದಾಗಿದೆ. ಹೆಸ್ಕಾಂ ಮತ್ತು ಜೆಸ್ಕಾಂ ಗಳ ಬಾಕಿಯು ಅಧಿಕವಾಗಿದೆ. ಅಂದರೆ ಕವಿಪ್ರನಿನಿಯ ವಾರ್ಷಿಕ ಆದಾಯವು ಶೇ 17ರಷ್ಟು ಕಡಿಮೆಯಾಗಿರುತ್ತದೆ. ಮಾನ್ಯ ಆಯೋಗವು ಪ್ರಸರಣ ದರದ ಮೊತ್ತವನ್ನು ಪೂರ್ಣವಾಗಿ ಅನುಮೋದಿಸಿದ್ದರೂ , ವಿಸಕಂಗಳು ಮಾಸಿಕವಾಗಿ , ನಿಯಮಿತವಾಗಿ ಪಾವತಿ ಮಾಡುತಿಲ್ಲವೆಂದು ಆಯೋಗದ ಗಮನಕ್ಕೆ ತರಲಾಗಿದೆ.

ಈ ಹಿನ್ನೆಲೆಯಲ್ಲಿ, ಎಸ್ಕಾಂ ಗಳಿಗೆ ದರ ಆದೇಶದ ಪ್ರಕಾರ ನಿಗದಿಪಡಿಸಿರುವ ಮೊತ್ತವನ್ನು ಒಂದು ವರ್ಷದ ಅವಧಿಯಲ್ಲಿ ಪೂರ್ಣವಾಗಿ ಪಾವತಿಸುವಂತೆ ನಿರ್ದೇಶಿಸಲು ಕೋರಲಾಗಿದೆ.

## 8.2 ವಿಸಕಂ ಗಳು ದರ ಪಾವತಿ ಮಾಡಲು ಪಾಲಿಸಬೇಕಾದ ಕ್ರಮ :

ಮೇಲೆ ಹೇಳಿದ ಸರ್ಕಾರಿ ಆದೇಶದ ಪ್ರಕಾರ ಮತ್ತು ಈಗ ಚಾಲ್ತಿಯಲ್ಲಿರುವ ಕ್ರಮದ ರೀತ್ಯಾ ಎಸ್ಕಾಂ ಗಳು ಎಸ್ಕ್ರೋ ಖಾತೆಯ ಮೂಲಕವೇ ಪಾವತಿಸಬೇಕಾಗಿರುತ್ತದೆ. ಸರ್ಕಾರಿ ಅದೇಶವಿದ್ದರೂ ಬೆಸ್ಕಾಂ ಏಕಪಕ್ಷೀಯವಾಗಿ ಎಸ್ಕ್ರೋ ವ್ಯವಸ್ಥೆಯಿಂದ ಹೊರಬಂದು ಎಲ್ ಸಿ ಮೂಲಕ ಪಾವತಿಸುತ್ತಿದೆ. ಇದಕ್ಕೆ ಕೆಇಆರ್‌ಸಿ ಯ ಬಹುವಾರ್ಷಿಕ ದರದ ಕಂಡಿಕೆ 3.18 ಅನ್ನು ಕಾರಣವಾಗಿ ನೀಡುತ್ತಿದೆ. ಆದರೆ ಕೆ ಇ ಅರ್ ಸಿ ಯ ರೆಗ್ಯುಲೇಷನ್ ನಲ್ಲಿ, ಎಲ್ ಸಿ ಮೂಲಕವೇ ಪಾವತಿಸ ಬೇಕೆಂದು ಕಡ್ಡಾಯ ಮಾಡಿರುವುದಿಲ್ಲ. ಆದರೂ ಬೆಸ್ಕಾಂ ಸದರಿ ರೆಗ್ಯುಲೇಷನ್ ಕಾರಣವಾಗಿಟ್ಟುಕೊಂಡು ಎಸ್ಕ್ರೋ ಇಂದ ಹೊರಬಂದಿದೆ. ಇದಲ್ಲದೇ , ಸದರಿ ರೆಗ್ಯುಲೇಷನ್ ಅನ್ವಯ ಮಾಡಿಕೊಂಡು ರಿಯಾಯಿತಿ ಮೊತ್ತವನ್ನು ಪ್ರಸರಣ ದರದಲ್ಲಿ ಹಿಡಿದುಕೊಳ್ಳುತ್ತಿದೆ. ಆದರೆ, ಎಸ್ಕ್ರೋ ವ್ಯವಸ್ಥೆಯಿಂದ ಗ್ರಾಹಕರಿಗೆ ಬ್ಯಾಂಕ್ ವಿಧಿಸುವ ಅಧಿಕ ಹೊರೆ ತಪ್ಪಿಸಬಹುದಾಗಿದೆ. ಎಲ್ ಸಿ ಯ ಪರಿಣಾಮವು ಗ್ರಾಹಕರ ಹಿತಾಸಕ್ತಿಗೆ ವ್ಯತಿರಿಕ್ತವಾಗಿರುವ ಹಿನ್ನೆಲೆಯಲ್ಲಿ ಹಾಗೂ ಸರ್ಕಾರಿ ಆದೇಶದ ಹಿನ್ನೆಲೆಯಲ್ಲಿ ಮತ್ತು ಕವಿನಿ ಅಯೋಗವು ಅನುಮೋದಿಸಿರುವ ಪ್ರಸರಣ ಸೇವೆ ಒಪ್ಪಂದದ ಹಿನ್ನೆಲೆಯಲ್ಲಿ ಬೆವಿಕಂ ಯವರಿಗೆ ಎಸ್ಕ್ರೋ ಮೂಲಕವೇ ಪಾವತಿಸುವಂತೆ ನಿರ್ದೇಶಿಸಲು ಕವಿಪ್ರನಿನಿಯು ವಿನಮ್ರವಾಗಿ ಪ್ರಾರ್ಥಿಸುತ್ತದೆ.

ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ಕವಿನಿ ಅಯೋಗವು ಪ್ರಸರಣ ಸೇವೆ ಒಪ್ಪಂದವನ್ನು ಅನುಮೋದಿಸುವ ಹಂತದಲ್ಲಿ 8.7 ಕಂಡಿಕೆಯನ್ನು ಸೇರಿಸಿದೆ. ಈ ಪ್ಯಾರಾದಲ್ಲಿ, ಎಸ್ಕ್ರೋ ಮೂಲಕ ವಿಸಕಂಗಳು ಪಾವತಿ ಮಾಡಿದಾಗ ಅದಕ್ಕೆ ಯಾವುದೇ ರಿಯಾಯಿತಿ ಅಥವಾ ದಂಡ ವಿಧಿಸುವುದಿಲ್ಲವೆಂದು ತಿಳಿಸಿದೆ. ಈ ಒಪ್ಪಂದವನ್ನು ಅನುಮೋದಿಸುವಾಗ ಸಾರ್ವಜನಿಕ ಹಿಯರಿಂಗ್ ನಡೆದು ಎಲ್ಲಾ ಭಾಧಿತರ ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ , ಕವಿನಿ ಆಯೋಗವು

ಫೆಬ್ರವರಿ 2012 ರಲ್ಲಿ ಒಪ್ಪಿಗೆ ನೀಡಿದೆ. ತದ ನಂತರ ವಿಸಕಂ ಮತ್ತು ಕವಿಪ್ರನಿನಿ ನಡುವೆ ಈ ಒಪ್ಪಂದವು ಮೇ 2012 ರಲ್ಲಿ ಸಹಿಯಾಗಿದೆ. ಹೀಗೆ ಈ ವಿಷಯದ ಬಗ್ಗೆ ಸಂಪೂರ್ಣ ಅರಿವಿದ್ದೂ ಬೆಸ್ಕಾಂ ಏಕಪಕ್ಷೀಯವಾಗಿ ಎಸ್ಕ್ರೋ ವ್ಯವಸ್ಥೆಯಿಂದ ಹೊರಬಂದು ಎಲ್ ಸಿ ಮೂಲಕ ಪಾವತಿಸುತ್ತಿದೆ ಹಾಗು ತತ್ಸಂಬಂದ ರಿಯಾಯಿತಿ ಕೂಡ ಮಾಸಿಕ ಪ್ರಸರಣಾ ದರಲ್ಲಿ ಮುರಿದುಕೊಳ್ಳುತ್ತಿದೆ. ತನ್ನ ಈ ಕ್ರಮಕ್ಕೆ ಕ.ವಿ.ನಿ ಆಯೋಗದ (ಕೆ.ಇ.ಅರ್.ಸಿ) ರೆಗ್ಯುಲೇಷನ್ ಅನ್ನು ಕಾರಣ ವಾಗಿ ತೋರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಮತ್ತು ಗ್ರಾಹಕರ ಹಿತಾಸಕ್ತಿಯಿಂದ, ಮಾನ್ಯ ಆಯೋಗವು ಮೇಲೆ ಹೇಳಿದ ರೆಗ್ಯುಲೇಷನ್ 3.18 ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗಿ ಕವಿಪ್ರನಿನಿಯು ಪ್ರಾರ್ಥಿಸುತ್ತದೆ. ಹಾಗೂ ತಮ್ಮ ಟ್ಯಾರಿಫ್ ಅದೇಶದ ಪ್ರಕಾರವೇ ಮಾಸಿಕ ಪ್ರಸರಣ ದರ ಪಾವತಿಸಬೇಕೆಂದು ಬೆಸ್ಕಾಂಗೆ ನಿರ್ದೇಶಿಸಬೇಕೆಂದು ಕೋರಿದೆ.

# 9.0 ಮನವಿ

ಗೌರವಾನ್ವಿತ ಆಯೋಗವು ಈ ಕೆಳಕಂಡ ಕೋರಿಕೆಗಳನ್ನು ಪರಿಗಣಿಸಿ ಅನುಮೋದಿಸಬೇಕೆಂದು ಕವಿಪ್ರನಿನಿಯು ವಿನಮ್ರವಾಗಿ ಪ್ರಾರ್ಥಿಸುತ್ತದೆ.

ಅ) 2016–17 ನೇ ಸಾಲಿನ ಪರಿಶೋಧಿತ ಲೆಕ್ಕದ ಪ್ರಕಾರ ವಾಸ್ತವಿಕ ವಾರ್ಷಿಕ ಆದಾಯದ ಅವಶ್ಯಕತೆ ಮತ್ತು ದಕ್ಷತಾ ಗಳಿಕೆ ( ಎಫ಼ಿಷಿಯನ್ಸಿ ಗೈನ್) ಅನುಮೋದನೆ.

ಆ) ದಿನಾಂಕ 1.4.18 ರಿಂದ ವಸೂಲಿ ಮಾಡಿಕೊಳ್ಳ ಬೇಕಾದ ಅಲ್ಪಾವಧಿ ಮುಕ್ತ ಪವೇಶ ಶುಲ್ಕ ವನ್ನು ಪರಿಷ್ಕರಿಸಿ ಕೊಡುವುದು..

ಇ) 2016–17ನೇ ಸಾಲಿನ ಎಸ್ ಎಲ್ ಡಿ ಸಿಯ ವಾಸ್ತವಿಕ ದರಗಳ ಅನುಮೋದನೆ

ಈ) ಬಹುವಾರ್ಷಿಕ ದರಗಳ ನಿಯಮಾವಳಿಯ ಕಂಡಿಕೆ 3.18 ಅನ್ನು ಸ್ಪಷ್ಟೀಕರಿಸುವುದು ಮತ್ತು ಸರ್ಕಾರಿ ಆದೇಶ 10.05.2005 ಮತ್ತು ಕ.ವಿ.ನಿ ಆಯೋಗದ ಅನುಮೋದಿತ ಪ್ರಸರಣ ಒಪ್ಪಂದಗಳ ಹಿನ್ನೆಲೆಯಲ್ಲಿ ವಿಸಕಂಗಳಿಗೆ , ದರಾದೇಶದಲ್ಲಿ ನೀಡಿರುವ ಪ್ರಸರಣ ದರವನ್ನು ಎಸ್ಕ್ರೋ ಖಾತೆಯ ಮೂಲಕ ಪಾವತಿಸಲು ಆದೇಶ ನೀಡುವುದು.

**ಕವಿಪ್ರನಿನಿ ಪರವಾಗಿ,**

ಆರ್ಥಿಕ ಸಲಹೆಗಾರರು,
(ನಿಯಂತ್ರಣ ವ್ಯವಹಾರಗಳು),
ಕಾವೇರಿ ಭವನ, ಬೆಂಗಳೂರು.